Secondly, by retaining this proviso, the Minister tries to take away a right that has accrued to the Council under the Constitution. If at any time a certain number of Councillors stipulated in that behalf under the Statute want to express no confidence in the President or Vice-President, they must be allowed to exercise that right and any proviso to curtail that right is contrary to the fundamental right that has accrued under the Constitution. Therefore, I am opposing it. It may stand the test of constitutional validity also. Retaining this proviso, trying to take away the right, is something which is not consistent with the principle of clause 57 or the provisions of the Constitution.

So far as the second amendment is concerned, according to the provision made, the term of office of every President and of every Vice-president is one year in the case of a City Muncipal Council and two years in the case of a Town Muncipal Council. Here Government want to get in. With the consent of the Council, the term may be limited to one year and the election be held every year. In what manner Government could ascertain the consent of the Councillors, I am unable to understand. Government may not hesitate to ascertain the sense of the House in every municipal council.

Sri K. PUTTASWAMI.—May I add a word of clarification to avoid further discussion in this matter ? Such a provision exists in our City Municipal Council Act. What is done is, the Municipal council passes a resolution expressing its desire to limit the term to one year and Government approves of it. Therefore, there is no question of consulting the municipal council.

Sri G. V. GOWDA.—Why should one particular muncipal council limit the term of President or Vice-president to one year and some other municipal council to 4 years? We should have uniformity at least in this respect Therefore, I am opposing those particular amendments for the reasons that I have already assigned.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇವರು ಹೇಳುವುದನ್ನೆಲ್ಲ ಕೇಳುತ್ತೇವೆ. ಆದರೆ ಇವರು ಹೇಳಿದ್ದನ್ನು ಕೇಳುತ್ತೇವೆ ಎಂದು ಮಾಡಬಾರದ್ದನ್ನೆಲ್ಲ ಮಾಡುವುದಕ್ಕೆ ಹೋಗಬಾರದು. ಇದರಲ್ಲಿ ಈಗ ನಾವು ನಮೂದು ಮಾಡಿರುವ ರೀತಿಯಲ್ಲಿ ಇರುವ ಕಷ್ಟವನ್ನು ಹೇಳಲಿಲ್ಲ. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗಳು ನಡೆದು ಒಂದೆರಡು ವರ್ಷವಾದ ಮೇಲೆ ಆ ಸ್ಥಾನಗಳನ್ನು ಅವರು ಬಿಟ್ಟು ಮತ್ತೊಬ್ಬರು ಆ ಸ್ಥಳಕ್ಕೆ ಬಂದಾಗ ಏನಾದರೂ ಅನಾಹುತ ನಡೆದಿದೆ ಎಂದರೆ ಒಪ್ಪಿಕೊಳ್ಳುತ್ತೇನೆ. ಒಬ್ಬರು ಮೈಸೂರು ಮುನಿಸಿಪಾಲಿಟಿಯಲ್ಲಿ ಅಧ್ಯಕ್ಷರಾಗಿದ್ದವರು, ಇನ್ನೊಬ್ಬರು ಈ ಕಲ್ಯಾಣ ನಗರದ ಮೇಯರ್ ಆಗಿದವರು. ಇವರಿಬ್ಬರ ಅನುಭವದ ಮೇಲೆ ಈ ರೀತಿ ಮಾಡಿದ್ದರೆ ಯೋಜನೆ ಮಾಡಬಹುದು. ಬೊಂಬಾಯಿ ಕರ್ಣಾಟಕದಲ್ಲೆ ಹೀಗಿದೆ, ಹೈದರಾಬಾದು ಕರ್ಣಾಟಕದಲ್ಲಿ ಹೀಗಿದೆ ಎಂದು ತಿದ್ದುಪಡಿಯನ್ನು ತರುವುದಾದರೆ ನಾವು ಅದನ್ನು ಒಪ್ಪುವುದಕ್ಕೆ ಸರ್ವಥಾ ಸಾಧ್ಯವಿಲ್ಲ. ಈಗಿರುವ ಕಾರ್ಪೊರೇಷನ್ ಆಕ್ಟ್ ಮತ್ತು ಮೈಸೂರು ಮುನಿಸಿಪಾಲಿಟಿಗಳ ಆಕ್ಟ್ ಪ್ರಕಾರ ಒಂದು ವರ್ಷಕ್ಕೊಮ್ಮೆ ಕಾರ್ಪೊರೇಷನ್ ಮೇಯರ್ ಮತ್ತು ಮೈಸೂರು ಸಿಟಿ ಮುನಿಸಿಪಾಲಿಟಿ ಅಧ್ಯಕ್ಷರ ಚುನಾವಣೆಯಾಗಬೇಕೆಂದು ಇದೆ. ಅದನ್ನು ಬಿಟ್ಟು ಇವತ್ತು ಹೈದರಾಬಾದಿನಿಂದ ಬಂದಿರುವ ಮೂರು ಜಿಲ್ಲೆಗಳವರು ಮತ್ತು ಬೊಂಬಾಯಿ ಕರ್ಣಾಟಕದ ನಾಲ್ಕು ಜಿಲ್ಲೆಗಳವರು ಈಗಿರತಕ್ಕ ರೀತಿಯಲ್ಲಿ ಇರಕೂಡದು, ಕೌನ್ಸಿಲ್ ಚುನಾವಣೆಯಾದ ಮೇಲೆ ಅದರ ಪೂರ್ಣ ಅವಧಿಯವರೆಗೆ ಇರಬೇಕೆಂದು ಒತ್ತಾಯ ಮಾಡಿದರು ಎಂದು ಸೆಲೆಕ್ಟ್ ಕಮಿಟಿಯಲ್ಲಿ ಒಪ್ಪಿಕೊಂಡಿದ್ದುದಕ್ಕೆ ಈಗ ತಿದ್ದುಪಡಿಯನ್ನು ತಂದಿದ್ದೀರಾ, ಅಥವಾ ಯಾರ ಒತ್ತಡದ ಮೇಲೆ ಈ ತಿದ್ದುಪಡಿಯನ್ನು ತಂದಿದ್ದೀರಿ, ಇದಕ್ಕೆ ನಿಮ್ಮ ಸಮಜಾಯಿಷಿ ಏನು? ಜನಾಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇವೆಂದು ಹೇಳುತ್ತೀರಿ. ಜನಾಭಿಪ್ರಾಯಕ್ಕೆ ಮನ್ನಣೆ ಕೊಡತಕ್ಕ ತಾವು ಆ ಜನಾಭಿಪ್ರಾಯಕ್ಕೆ ತಿಲತರ್ಪಣವನ್ನು ಕೊಟ್ಟು ಯಾರೋ ಒಬ್ಬರು ಹೇಳಿದರು, ಅಲ್ಪ ಸಂಖ್ಯಾತರು ನಿಮ್ಮ ಕಡೆಯವರು ಹೇಳಿದರು ಎಂದು ಬಹು ಸಂಖ್ಯಾತರಿಗೆ ನೋವಾಗುವ ರೀತಿಯಲ್ಲಿ ತಿದ್ದುಪಡಿಯನ್ನು ತರುವುದು ಸರ್ವಥಾ ನ್ಯಾಯವಲ್ಲ. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಪ್ರೊಫೆಸರ್ ಎಂ. ವಿ. ಕೃಷ್ಣರಾಯರು ಮಂಡ್ಯದಲ್ಲಿ "the soil of India is not suited for democracy" ಎಂದು ಹೇಳಿದ್ದಾರೆ.

Mr. SPEAKER.—Does the Hon'ble Member agree?

Sri C. J. MUCKANNAPPA.—I don't agree. Looking at the conduct of the party now in power, one will certainly conclude that democracy may not survive.

Mr. SPEAKER.—Democracy is broad-bassed.

Sri C. J. MUCKANNAPPA.—It is 138 on the other side; 70 on this side.

ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಪ್ರಜಾಪ್ರಭುತ್ವವನ್ನು ಬೆಳೆಸತಕ್ಕವರು ಈ ರೀತಿ ಮಾಡಬಾರದು.

ಯಾವುದಾದರೂ ಒಂದು ಮುನಿಸಿಪಾಲಿಟಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯನ್ನು ಹೆಚ್ಚು ಮಾಡಬೇಕು ಎಂದರೆ ಹಿಂದಿನ ಬಾಗಿಲಿನಿಂದ ಒಂದು ನಿರ್ಣಯ ಮಾಡಿ ತರಿಸುತ್ತಾರೆ. ಆದೇ ಇನ್ನೊಂದು ಕಡೆ ಪ್ರೆಸಿಡೆಂಟರು ಬೇಡ ಎಂದರೆ, ಅವರು ನಮ್ಮ ಹಿಡಿತದಲ್ಲಿಲ್ಲ, ನಮ್ಮ ಪಾತಿಗೆ ಬೆಲೆಕೊಡುವುದಿಲ್ಲ ಎಂದು ನಿರ್ಣಯಮಾಡಿ ಕಳಿಸಿ ಎಂದು ಹಿತ್ತಲಕಡೆಯಿಂದ ಡೈರೆಕ್ಷನ್ ಕೊಡುತ್ತೀರಿ. ಈಗ ಇರುವ ಪ್ರಕಾರ ಇರಲಿ. ನಿಮಗೆ ಬೇಕಾದವರಿರಲಿ, ಬೇಡವಾದವರಿರಲಿ, ಎರಡು ವರ್ಷಕ್ಕೆ ಅವರನ್ನು ತೆಗೆದುಹಾಕಿ. ಬೇಕಾದ ರೀತಿಯಲ್ಲಿ ಕಾನೂನನ್ನು ಬದಲಾವಣೆ ಮಾಡುವುದಕ್ಕೋಸ್ಕರವಾಗಿ ಈ ತರಹ ತಿದ್ದುಪಡಿಯನ್ನು ತಾವು ತರತಕ್ಕದ್ದು ನ್ಯಾಯವಾಗಿ ಕಾಣುವುದಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ನಿಮ್ಮ ಪಕ್ಷದವರೇ ಅಧಿಕಾರದಲ್ಲಿದ್ದರು ಎಂದು ತಿಳಿದುಕೊಳ್ಳಿ. ಅವರಿಗಾದರೂ ಕೆಲಸ ಮಾಡಲು ಮನಸ್ಸಿಗೆ ಏನು ದೃಢತೆ ಇರುತ್ತದೆ, ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆ? ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿ ನಡೆದರೆ, ಕಾಂಗ್ರೆಸ್ ಮಂತ್ರಿಮಂಡಲಕ್ಕೆ

ವಿರೋಧವಾಗಿ ನಡೆದರೆ ಒಂದು ನಿರ್ಣಯ ಮಾಡಿಸಿ ತಮ್ಮನ್ನು ಅಧಿಕಾರದಿಂದ ತೆಗೆದುಹಾಕುತ್ತಾರೆ ಎನ್ನುವ ಶಂಕೆ ಇರುತ್ತದೆ. ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಧ್ಯಕ್ಷರು ಧರ್ಮಸ್ಥಳಕ್ಕೆ ಸದಸ್ಯರನ್ನು ಕರೆದುಕೊಂಡು ಹೋಗಿ ಪ್ರಮಾಣ ಮಾಡಿಸುತ್ತಾರೆ. ಕಾಂಗ್ರೆಸ್ ಪಕ್ಷಕ್ಕೆ ಓಟು ಕೊಟ್ಟರೇ, ಇಲ್ಲವೇ, ಕಾಂಗ್ರೆಸ್ ಪಕ್ಷಕ್ಕೆ ಓಟು ಕೊಟ್ಟಿದ್ದರೆ ಪ್ರಮಾಣ ಮಾಡಿ ಎಂದು ಕೇಳುತ್ತಾರೆ. ಇಂಥ ಒಂದು ಪ್ರಸಂಗ ನಡೆದಿದೆ, ಸ್ವಾಮಿ.

ಮುನಿಸಿಪಲ್ ಪ್ರೆಸಿಡೆಂಟರಿಗೆ ಓಟು ಹಾಕಲಿಲ್ಲವೆಂದು ಆ ಸದಸ್ಯರನ್ನೆಲ್ಲ ಕರೆದುಕೊಂಡು ಧರ್ಮಸ್ಥಳಕ್ಕೆ ಹೋಗಿ ಮಂಜುನಾಥೇಶ್ವರನ ಮುಂದೆ ಪ್ರಮಾಣ ಮಾಡಬೇಕು ಎಂಧು ಅಧ್ಯಕ್ಷರು ಕುಳಿತುಕೊಂಡು ಪ್ರಮಾಣ ಮಾಡಿಸಲಿಲ್ಲವೇ...

ಅಧ್ಯಕ್ಷರು.—ಯಾವ ಅಧ್ಯಕ್ಷರು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರು. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಕಾನೂನು ಮಾಡುತ್ತೇವೆ. ಈ ವಿಷಯದಲ್ಲಿ ಬಹಳ ಗೂಢವಾದ ಚರ್ಚೆ ನಡೆದಿದೆ. ಇವತ್ತಿನ ದಿವಸ ಮತ್ತೆ ಮಂತ್ರಿಗಳು ಇದಕ್ಕೆ ತಿದ್ದುಪಡಿಯನ್ನು ತಂದಿರುವುದನ್ನು ನಾನು ಒಪ್ಪುವುದಿಲ್ಲ.

ದಾವಣಗೆರೆ ಸಿಟಿ ಮುನಿಸಿಪಾಲಿಟಿಯ 10 ಜನ ಸದಸ್ಯರು 17 ದಿನ ಊರಿನಲ್ಲಿ ಇರುವುದಕ್ಕಾಗಲಿಲ್ಲ. ಅವರು ಊರನ್ನು ಬಿಟ್ಟು ವನವಾಸ ಮಾಡುವ ಹಾಗೆ ಮಾಡಬೇಕಾಯಿತು. ಏಕೆಂದರೆ ತಮ್ಮವರನ್ನೇ ಅಧ್ಯಕ್ಷ ಗದ್ದುಗೆಗೆ ಏರಿಸಬೇಕು ಎಂದು.

ಒಬ್ಬೊಬ್ಬ ಮುನಿಸಿಪಲ್ ಕೌನ್ಸಿಲರು 10-15 ಸಾವಿರ ರೂಪಾಯಿಗಳಿಗೆ ಖರೀದಿ ಆಗತಕ್ಕ ಪ್ರಸಂಗ ಇದ್ದರೆ ಅದನ್ನು ತಪ್ಪಿಸದಿದ್ದರೆ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಇದು ಒಂದು ತರಹ ವ್ಯಾಪಾರವಾಗುತ್ತದೆ. ಅದಕ್ಕೇ ಸರ್ಕಾರದವರು ತಮಗೆ ಇರತಕ್ಕ ಅನುಭವವನ್ನು ಉಪಯೋಗ ಮಾಡಿ ಒರಿಜಿನಲ್ ಬಿಲ್‌ನಲ್ಲಿ ಏನು ವಿಶದವಾಗಿ ಇಟ್ಟಿದ್ದೆವೋ ಅದೇ ವಿಷಯ ಇರಬೇಕೇ ಹೊರತು ಅದಕ್ಕೆ ಬೇರೆ ರೀತಿಯಲ್ಲಿ ತಾವು ಬೇರೆ ಬಣ್ಣ ಕೊಡಬಾರದು, ಇದನ್ನು ಯಾರಾದರೂ ನೋಡಿದರೆ ಕಲರ್‌ಡ್ ಲೆಜಿಸ್ಲೇಷನ್, ಬಣ್ಣದಂತಹ ಕಾನೂನು ಮಾಡಿದ್ದಾರೆ, ಬಣ್ಣ ಕೊಟ್ಟಿದ್ದಾರೆ, ಯಾವ ಬಣ್ಣಕ್ಕೆ ಬೇಕಾದರೂ ತಿರುಗಿಕೊಳ್ಳಬಹುದು ಎಂದು ಜನ ಹೇಳುವಂತಾಗಬಾರದು.

ಅಧ್ಯಕ್ಷರು.—ಕಲರಬಲ್ ಲೆಜಿಸ್ಲೇಷನ್ ಎಂದಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣಪ್ಪ.—ಹೌದು ಸ್ವಾಮಿ. ದೇವರು ತಮಗೆ ಆಯುಸ್ಸುಕೊಟ್ಟು ತಮ್ಮ ಶತಮಾನೋತ್ಸವ ನಡೆಯಲಿ ಒಂದು ಪಕ್ಷ ತಾವು ಆ ಜಾಗ ಬಿಟ್ಟು ಇನ್ನು 5 ವರ್ಷ ಆದಮೇಲೆ ವಕೀಲಿ ಪ್ರಾರಂಭ ಮಾಡಿದರೆ ಇಂಥಾ ಪ್ರಕರಣ ಬಂದರೆ ನ್ಯಾಯಾ ಸ್ಥಾನದ ಮುಂದೆ ತಾವೇ ಈ ರೀತಿ ಹೇಳತಕ್ಕ ಪ್ರಸಂಗ ಬಂದೀತು—ಈ ಲೆಜಿಸ್ಲೇಷನ್ ಸರಿಯಿಲ್ಲ ಎಂದು, ನೋ-ಕಾನ್‌ಫಿಡೆನ್ಸ್ ತರಬೇಡಿ ಎಂದು ಹೇಳುತ್ತೀರಿ. 11 ಗಂಟೆಗೆ ನೋ-ಕಾನ್‌ಫಿಡೆನ್ಸ್ ಮೋಷನ್ ಬರುತ್ತದೆ, ಇನ್ನೊಂದು ನಿಮಿಷಕ್ಕೆ ಓಟಿಂಗು ಆಗಬೇಕು—3 ಜನ ಮೆಂಬರುಗಳನ್ನು ಹಣ ಕೊಟ್ಟು ಕಾರ್‌ನಲ್ಲಿ ಕಿಡ್‌ನ್ಯಾಪ್ ಮಾಡುತ್ತಾರೆ. ಅವರು ನಮ್ಮನ್ನು ಬಂದೋಬಸ್ತು ಮಾಡಿ ಬಂಧನದಿಂದ ಕರೆದುಕೊಂಡು ಹೋದರು ನಾವೇನು ಮಾಡೋಣ ಎಂದು ಹೇಳುತ್ತಾರೆ. ಇಷ್ಟು ದಿವಸದೊಳಗೆ ತರುವುದಕ್ಕೆ ಅವಕಾಶವಿರಬಾರದು ಎಂದು ತಾವು ರೆಸ್ಟ್ರಿಕ್ಟ್ ಮಾಡುತ್ತಾ ಇದ್ದೀರಿ ಇದು ನ್ಯಾಯವೇ ? ಆದ್ದರಿಂದ ಮೊದಲು ಯಾವ ರೀತಿ ಇತ್ತೋ, ಅದೇ ರೀತಿ ಇರಬೇಕು. ನಿಜವಾಗಿ ಹೇಳುವುದಾದರೆ ತಮ್ಮಲ್ಲಿ ನಿಜವಾಗಿಯೂ ಗಂಡುಸುತನ ಇರುವುದಾದರೆ—

(ಕೆಲವು ಸದಸ್ಯರು.—ಏನುಸ್ವಾಮಿ 'ಗಂಡಸುತನ' ಎಂದರೆ ?)

ಗಂಡಸುತನ ಎಂದರೆ ಧೈರ್ಯ, ಎದೆಗಾರಿಕೆ, ಗಂಡಸುತನ ಎನ್ನುವುದು ಎದೆಗಾರಿಕೆ, ತಮಗೆ ಇರುವುದಾದರೆ, ತಮ್ಮ ಪಾರ್ಟಿ ಜನರನ್ನು ಒಪ್ಪಿಸುವುದಕ್ಕೆ ನಿಮಗೆ ಶಕ್ತಿ ಇರುವುದಾದರೆ ಈಗಿರುವ ರೀತಿಯಲ್ಲೇ ಇಟ್ಟುಕೊಂಡು ತಮ್ಮ ತಿದ್ದುಪಡಿಗಳನ್ನು ವಾಪಸುತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ವಿನಯದಿಂದ ಪ್ರಾರ್ಥನೆ ಮಾಡಿಕೊಳುತ್ತೇನೆ.

†Sri B. R. SUNTHANKAR.—Sir, I oppose both the provisos to sub clause 9 as well as sub-clause 11. As regards no confidence motion, I fully agree with Sri Venkate Gowda that this proviso curtails the right and freedom of the councillors. The other factor is that, within one year occasions may arise which may call for a no confidence motion. But the councillors will have to wait for one year according to this. It is very unfair and very unjust. The other consideration is that during the

(Sri B. R. SUNTHANKAR)

last year of the term of president the councillors will be prohibited from moving any no confidence motion. During the last year of the term of his office, the President may behave in any manner he likes and there will be no check or restriction on him. Regarding sub-clause 11, as has been pointed out by my friend Sri G. Venkatai Gowda, let there be uniformity throught out the State. Besides, the Government should not interfere in these matters and this is an encroachment. If the President is not liked by the Government or the Government officers, then, Government may find out some excuse to remove him and work out in such a way that he is removed and another henchman of the Government may come there. Government wants to take away the powers of the municipality. What is the necessity for Government to inferfere in the affairs of the municipality every day? According to the Bombay Act, general elections take place every year with the understanding of the councillors giving chance to each person to act as President though the President may remain for the full term.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಒಂದು ವರ್ಷದ ಟೈಂ ಕೊಟ್ಟಿರುವುದು ತುಂಬಾ ಜಾಸ್ತಿ. ಸಾಮಾನ್ಯವಾಗಿ ಇಂತಹ ದೊಡ್ಡ ದೊಡ್ಡ ಸಭೆಗಳಲ್ಲೂ ನೋ ಕಾನ್‌ಫಿಡೆನ್ಸ್ ತಂದ ಮೇಲೆ 6 ತಿಂಗಳ ಅವಧಿ ಕೊಡುತ್ತಾರೆ. ಮುನಿಸಿಪಲ್ ಕೌನ್ಸಿಲ್‌ಗಳಲ್ಲಿ 3 ತಿಂಗಳ ಅವಧಿ ಕೊಟ್ಟರೆ ಸಾಕು, ಏಕೆಂದರೆ ಪಾರ್ಟಿಯಲ್ಲಿ ಜಮಾ ಖರ್ಚು ವರ್ಕ್ ಔಟ್ ಆಗುತ್ತಾ ಇರುತ್ತದೆ, it will be a tug-of-war. ಅದಕ್ಕೆ ಅವಕಾಶವಿಲ್ಲದಂತಾಗುತ್ತದೆ.

He has to face the no confidence; otherwise, he will be a monarch and a dictator afterwards.

ಒಂದು ವರ್ಷದ ಟೈಂನಲ್ಲಿ ಒಂದೇ ಸಾರಿ ನೋ ಕಾನ್‌ಫಿಡೆನ್ಸ್ ಮೋಷನ್ ತರುವುದಕ್ಕೆ ಅವಕಾಶವಿರುತ್ತದೆ. The life of the council will not be charming. ಆದ್ದರಿಂದ ಮೊದಲಿನ ಅಕ್ಟ್‌ನಲ್ಲಿ ಹೇಗಿತ್ತೋ ಅದೇ ಒಳ್ಳೆಯದೇ ಹೊರತು ಈಗಿರುವಂತಹ ಒಂದು ವರ್ಷದ ಅವಧಿಯನ್ನು ತೆಗೆದುಹಾಕಬೇಕು, ಇದನ್ನು ಒಪ್ಪುವುದಕ್ಕಾಗುವುದಿಲ್ಲ.

ಕ್ಲಾಜ್ 11ರಲ್ಲಿ ಟರ್ಮ್ ಆಫ್ ಆಫೀಸ್ ಒಂದು ವರ್ಷ, ಎರಡು ವರ್ಷ ಎಂದು ಇದೆ; ಇದು ಬಹಳ ಸಾಧುವಾದುದು. ಸರ್ಕಾರ ಸಾಮಾನ್ಯವಾಗಿ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ನ ಪವರ್ಸ್‌ನಲ್ಲಿ ಇಂಟರ್‌ಫಿಯರ್ ಮಾಡಿದರೆ ಯಾವ ಆಡಳಿತವೂ ಸುಲಲಿತವಾಗಿ ನಡೆಯುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಸರ್ಕಾರದವರು ದೂರದಲ್ಲಿದ್ದರೆ ಅವರಿಗೂ ಗೌರವ ಬರುತ್ತದೆ, ಮತ್ತು ಪೌರ ಸಭೆ, ಕಾರ್ಪೊರೇಷನ್ ಅವರಿಗೂ ಗೌರವ ಬರುತ್ತದೆ. ಬೇಕಾದರೆ ಇನ್ನೊಂದು ಕೆಲಸ ಮಾಡಿ ಇದಕ್ಕಿಂತ ಹೆಚ್ಚಾಗಿ ಜನಗಳೇ ಪ್ರೆಸಿಡೆಂಟರು, ಮತ್ತು ವೈಸ್-ಪ್ರೆಸಿಡೆಂಟರನ್ನು ನೇರವಾಗಿ ಚುನಾವಣೆ ಮಾಡಲಿ ಆಗ ಜವಾಬ್ದಾರಿ ಜನಗಳ ಮೇಲೇ ಇರುತ್ತದೆ. ಸರ್ಕಾರದವರೂ ಹೊರೆ ಹೊತ್ತು ಮುನಿಸಿಪಾಲಿಟಿಯನ್ನು ಹದಗೆಡಿಸಿದ್ದೇ ಆದರೆ ಅದರಿಂದ ದೇಶಕ್ಕೆ ಒಳ್ಳೆಯದಲ್ಲ, ಮತ್ತು ಮುನಿಸಿಪಾಲಿಟಿಗಳಿಗೂ ಒಳ್ಳೆಯದಾಗುವುದಿಲ್ಲ.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ)—ಇದು ಬಹಳ ಮುಖ್ಯವಾದ ವಿಷಯ. 42ನೆಯ ಪ್ರಕರಣದಲ್ಲಿ ಏನು ಹೇಳಿದೆಯೆಂದರೆ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಮತ್ತು ಕೌನ್‌ಸಿಲರ್‌ಗಳಿಗೆ ಸಂಬಂಧಪಟ್ಟ ಅಧಿಕಾರವೇನಿದೆ ಎನ್ನುವುದನ್ನು ಹೇಳಿದೆ... ಈಗಾಗಲೇ ಶ್ರೀಮಾನ್ ಸುನ್ಥನ್‌ಕರ್ ಅವರೂ ಶ್ರೀ ವೆಂಕಟರಾಯಪ್ಪನವರೂ ಸಭೆಗೆ ತಿಳಿಸಿರುವಂತೆ ಇದರಲ್ಲಿ ಹೀಗೆ ಇನ್ನೂ ಅನೇಕ ತಪ್ಪು ಭಾವನೆಗಳಿರಬಹುದು. ಈ 42ನೆಯ ಕ್ಲಾಜನ್ನು ವರದಿಯಲ್ಲಿ ಈಗೆ ಬರೆದಿದ್ದಾರೆ :—

"For every municipality here shall be a President........."

Mr. SPEAKER.—It is "there shall be." It is an error. Errata was issued subsequently.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಸಚಿವರು ನಮ್ಮನ್ನು ಕನ್‌ಫ್ಯೂಸ್ ಮಾಡಿಕೊಂಡಿದ್ದಾರೆಂದು ಹೇಳಿದರು. ಆದರೆ ನಾವೇನೂ ಹಾಗೆ ಮಾಡಿಕೊಂಡಿಲ್ಲ. ಇಲ್ಲಿ ಕನ್‌ಫ್ಯೂಷನ್ ಆಗಿಲ್ಲ, ಇಲ್ಲಿ ವರ್ಸ್ಟ್ ಕನ್‌ಫೌಂಡೆಡ್ ಆಗಿದೆ.

Sri B. R. SUNTHANKAR.—There are two versions in the reports submitted to us.

Mr. SPEAKER.—I have said that an errata has been issued. The corrections have been carried out subsequently.

ಶ್ರೀ ಎಸ್. ಗೋಪಾಲ ಗೌಡ.—ಆ ಎರಾಟ ಎಲ್ಲಿದೆ? ಅದನ್ನು ಇದರಲ್ಲಿ ಸೇರಿಸಿದ್ದಾರೇನು? ಇದನ್ನು ಆ ಸೆಲೆಕ್ಟ್ ಸಮಿತಿಯಲ್ಲಿದ್ದವರು ಯಾರಾದರೂ ಹೇಳಿದರೆ ನಮಗೆ ಅರ್ಥವಾಗುತ್ತದೆಯೇ ವಿನಾ, ಇಲ್ಲದಿದ್ದರೆ ಇಲ್ಲ. ಆದುದರಿಂದ ಸರ್ಕಾರದವರು ಇದನ್ನು ಇಲ್ಲಿ ಉದ್ದೇಶವಾಗಿ ಕೈಬಿಟ್ಟಿದ್ದಾರೆಂದು ಹೇಳಬಹುದು. ನಮಗೆ ಕೊಟ್ಟಿರತಕ್ಕ ಈ ಕೆಂಪು ರಟ್ಟಿನ ಪುಸ್ತಕದಲ್ಲೇನೋ ಈ ವಿಚಾರವಿಲ್ಲ. ಆದುದರಿಂದ ಈ ಬಗ್ಗೆ ಮಾನ್ಯ ಸಚಿವರು ಒಂದು ತಿದ್ದುಪಡಿಯನ್ನು ತರುವುದು ಯೋಗ್ಯವಾದ್ದಲ್ಲ. ಮಾನ್ಯ ಸಚಿವರು ಹೀಗೆ ತಮ್ಮ ಸ್ವಂತ ಅಭಿಪ್ರಾಯವನ್ನು ಒಂದು ತಿದ್ದುಪಡಿಯ ಮೂಲಕ ಅಳವಡಿಸಲು ಪ್ರಯತ್ನಪಟ್ಟಿರುವುದು ಇದೇನು ಆಳುವ ಪಕ್ಷದವರ ತೀರ್ಮಾನವೋ ಅಥವಾ ಶ್ರೀ ನಿಜಲಿಂಗಪ್ಪನವರ ಕ್ಯಾಬಿನೆಟ್ಟಿನ ತೀರ್ಮಾನವೋ ಗೊತ್ತಾಗುವುದಿಲ್ಲ. ಅಥವಾ ಯಾರಾದರೂ ಅಧಿಕಾರಿಗಳು ಹೇಳಿ ಹೀಗೆ ಮಾಡಿಸಿದ್ದಾರೋ ಗೊತ್ತಾಗುತ್ತಿಲ್ಲ. ಇಲ್ಲಿ ಅವಿಶ್ವಾಸ ಸೂಚನೆಯ ವಿವರಣೆಯನ್ನು ಕೊಟ್ಟಿದ್ದಾರೆ. ಒಂದು ವರ್ಷದಲ್ಲಿ ಒಂದಾವರ್ತಿ ಒಂದು ಅವಿಶ್ವಾಸ ನಿರ್ಣಯವನ್ನು ಸೂಚನೆ ಮಾಡಿಬಿಟ್ಟರೆ ಮತ್ತೆ ಆ ಸೂಚನೆಯನ್ನು ಆ ವರ್ಷದಲ್ಲಿ ತರುವಹಾಗಿಲ್ಲ, ಪದೇ ಪದೇ ಈ ಅವಿಶ್ವಾಸ ನಿರ್ಣಯದ ಸೂಚನೆ ಬಾರದಂತೆ ತಡೆಹಾಕಲು ಈ ಒಂದು ಕ್ಲಾಜನ್ನು ಸೇರಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ ವಾದ ಬಹಳ ವಿಚಿತ್ರವಾಗಿದೆ. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಬಗ್ಗೆ ಮಂಡಳಿಯವರಿಗೆ ವಿಶ್ವಾಸವಿಲ್ಲದಿರುವಾಗ ಅಲ್ಲಿ ಕೆಲಸಕಾರ್ಯಗಳು ಸುಗಮವಾಗಿ ನಡೆಯುತ್ತವೆಯೇ, ಇಲ್ಲವೇ ಎಂಬ ಪ್ರಶ್ನೆಯೇ ಇಲ್ಲ. ಪ್ರತಿಯೊಂದು ಕೆಲಸಕ್ಕೂ ಅವರ ಅಂಗೀಕಾರ ಮುದ್ರೆ ಬೇಕು. ಅಲ್ಲಿ ನಡೆಯತಕ್ಕ ಪ್ರತಿಯೊಂದು ಕೆಲಸಕಾರ್ಯಗಳೂ ಎಲ್ಲರ ಅನುಮತಿಯ ಮೇಲೆ ನಡೆಯಬೇಕಾಗಿರುತ್ತವೆ. ಹಾಗಿರುವಾಗ ಒಬ್ಬರ ಮೇಲೆ ಇನ್ನೊಬ್ಬರಿಗೆ ವಿಶ್ವಾಸವಿಲ್ಲವೆಂದು ಹೇಳತಕ್ಕ ಕಾಲದಲ್ಲಿ ಅಲ್ಲಿ ಕೆಲಸಗಳು ಸುಗಮವಾಗಿ ನಡೆಯುತ್ತವೆ ಎಂಬ ಪ್ರಶ್ನೆಯೇ ಇಲ್ಲ. ಈ ಅವಿಶ್ವಾಸ ನಿರ್ಣಯದ ಪ್ರಶ್ನೆ ಎದ್ದಿರುವಾಗ ಆದಷ್ಟು ಬೇಗ ಅಧ್ಯಕ್ಷರನ್ನೂ, ಉಪಾಧ್ಯಕ್ಷರನ್ನೂ ಬದಲಾಯಿಸಿದರೆ ಆಗ ಅಲ್ಲಿ ಕೆಲಸಗಳು ಸುಗಮವಾಗಿ ನಡೆಯುತ್ತವೆಯೇ ಹೊರತು ಇಲ್ಲದಿದ್ದರೆ ಇಲ್ಲ ಎಂಬುದಾಗಿ ಸಾಮಾನ್ಯ ಬುದ್ಧಿ ಇರತಕ್ಕ ಮನುಷ್ಯನಿಗೂ ಹೊಳೆಯುದಂಥ ವಿಷಯ ಇದು ಒಂದು ಸಾಮಾನ್ಯವಾದ ನಿಯಮ. ಯಾರು ಅಧ್ಯಕ್ಷರನ್ನು ಅಥವಾ ಉಪಾಧ್ಯಕ್ಷರನ್ನು ಚುನಾವಣೆ ಮಾಡಬಹುದೋ ಅವರು ಅವರ ಮೇಲೆ ಎಷ್ಟು ಸಾರಿ ಬೇಕಾದರೂ ಅವಿಶ್ವಾಸ ಸೂಚನೆಯನ್ನು ತರಬಹುದು. ಶ್ರೀಮಾನ್ ನಿಜಲಿಂಗಪ್ಪನವರ ಪಕ್ಷದವರು ಅವರ ಮೇಲೆ ಎಷ್ಟು ಸಾರಿ ಬೇಕಾದರೂ ಅವಿಶ್ವಾಸ ಸೂಚನೆಯನ್ನು ತರಬಹುದು. ಅದನ್ನು ಬಿಟ್ಟು ಈ ದಿವಸ ಶುಕ್ರವಾರ ತರಕೂಡದು, ಈ ದಿವಸ ರಾಹುಕಾಲ ಇದೆ ತರಬಾರದು ಎಂದು ಹೇಳುವ ಹಾಗೆ ಇಲ್ಲ. ಹೀಗಿರುವಾಗ ಇದನ್ನು ಕಾನೂನಿನಲ್ಲಿ ಅಡಕಮಾಡಬಹುದೇ ಎಂದು ಕೇಳುತ್ತೇನೆ? ಬಾಯಿಮಾತಿನಲ್ಲಿ ಬೇಕಾದರೆ ಹೇಳಬಹುದು. ಆದುದರಿಂದ ಮಾನ್ಯ ಸಚಿವರಿಗೆ ಯಾರಾದರೂ ಇಂಥ ಒಂದು ಅಭಿಪ್ರಾಯವನ್ನು ತಲೆಗೆ ಹಾಕಿರುವಾಗ ಅವರು ಇದನ್ನು ಸ್ವಲ್ಪ ಶಾಂತವಾತಾವರಣದಲ್ಲಿ ಆಲೋಚನೆ ಮಾಡಬೇಕಾಗಿದೆ. ಇದು ಅಂಥ ಸ್ಪಷ್ಟವಾದ ವಿಚಾರವಲ್ಲ. ಅವಿಶ್ವಾಸ ವ್ಯಕ್ತಪಡಿಸಲು ಯಾರುಯಾರಿಗೆ ಚುನಾವಣೆ ಮಾಡುವ ಅಧಿಕಾರವಿದೆಯೋ ಅವರೆಲ್ಲರಿಗೂ ಮರುಕ್ಷಣದಲ್ಲೇ ಅವಿಶ್ವಾಸ ಸೂಚನೆಯನ್ನು ತರುವುದಕ್ಕೂ ಅವಕಾಶವಿದ್ದೇ ಇದೆ. ಇದನ್ನು ಒಂದು ವರ್ಷಕಾಲ ಮುಂದುವರಿಸಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಇದನ್ನು ಹೀಗೇ ಬಿಟ್ಟುಕೊಂಡು ಬಂದರೆ ಅಲ್ಲಿ ಕೆಲಸಗಳೇನೂ ಆಗದೆ ಬಹಳ ತೊಂದರೆ ಆಗುತ್ತದೆ. ಆದುದರಿಂದ ಈ ಪ್ರಾವಿಸೋವನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ.

ಇನ್ನು ಈ 10-15 ದಿನಗಳ ನೋಟೀಸ್ ಅವಧಿಯ ವಿಚಾರಕ್ಕೆ ಬಂದರೆ ಇದು ಗಾತ್ರದಮೇಲೆ ಹೋಗತಕ್ಕ ವಿಚಾರವಲ್ಲ. ಒಂದು ಸಂಸ್ಥೆ ಸಣ್ಣದಿರಬಹುದು, ಇನ್ನೊಂದು ದೊಡ್ಡದಿರಬಹುದು. ಆದರೆ ಎಲ್ಲಕ್ಕೂ ಒಂದೇ ಅವಧಿ ಇರಬೇಕಾದ್ದು ಅಗತ್ಯ. ಆದುದರಿಂದ ಇಲ್ಲಿ ಈ 10 ದಿನಗಳನ್ನು ಇಟ್ಟುಕೊಂಡು 15 ದಿನಗಳನ್ನು ಕೈಬಿಡಬಹುದು.

ಇನ್ನು ನಾನೀಗ ಈ ಟರ್ಮ್ ಆಫ್ ಆಫೀಸಿನ ಹಗರಣದ ಬಗ್ಗೆ ಹೇಳುತ್ತೇನೆ. ಅದರ ಬಗ್ಗೆ ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರು ಆಗಲೇ ಹೇಳಿದ್ದಾರೆ. ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ಮೇಲೆ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿ, ಕಾರ್ಪೊರೇಷನ್ನಿನಲ್ಲಿ, ನಗರ ಸಭೆಯಲ್ಲಿ ಈ ಅಧ್ಯಕ್ಷ

(ಶ್ರೀ ಎಸ್. ಗೋಪಾಲಗೌಡ)

ಪದವಿಗಳನ್ನು ತೆಗೆದುಕೊಳ್ಳುವುದು ಒಂದು ದೊಡ್ಡ ಆಫರಿನಂತಾಗಿದೆ. ಅದರಂತೆ ಈಗಾಗಲೇ ನಮ್ಮ ಬೆಂಗಳೂರಿನಲ್ಲಿ ಅಧ್ಯಕ್ಷ ಪದವಿ ಕೊಡಿಸುತ್ತೇವೆಂದು ಎರಡು ಮೂರು ಜನರಿಗೆ ಅವರ ಮೂಗಿಗೆ ತುಪ್ಪ ಹಚ್ಚಿ ಅವರು ನಿತ್ಯವೂ ಅಧಿಕಾರ ಮಾಡುವ ಪಕ್ಷದ ಸದಸ್ಯರ ಮನೆಯ ಬಾಗಿಲಿಗೆ ಹೋಗಿ ಕಾಯುತ್ತಾ ಕುಳಿತಿರಬೇಕು ಮತ್ತು ಅವರು ಹೇಳುವ ಕೆಲಸಗಳನ್ನೆಲ್ಲಾ ಮಾಡಬೇಕು. ನಗರದಲ್ಲಿ ಹೀಗಾದರೆ ಶಿವಮೊಗ್ಗದಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವ ಪ್ರಕರಣ ಒಂದು ಪುರಾಣವಾಗಿ, ಅಧ್ಯಕ್ಷ ಚುನಾವಣಾ ಕಾಲದಲ್ಲಿ ಎಲ್ಲಿಯೋ ಮಿಸ್‌ಫೈರ್ ಆಗಿ, ಎಲ್ಲ ತಲೆಕೆಳಗಾಗಿ ಜಗಳ ಪ್ರಾರಂಭವಾಗಿ ಈಗ ಆ ಜಗಳ ಧರ್ಮಸ್ಥಳದವರೆಗೂ ಹೋಗುವ ಪರಿಸ್ಥಿತಿ ಒದಗಿದೆ. ಹಾಗೆ ನೂರಾರು ಉದಾಹರಣೆಗಳನ್ನು ಕೊಡಬಹುದು. ಒಂದು ಕಾನೂನಿನ ಮೂಲಕ ಜನ ಅವರನ್ನು ವೋಟು ಮಾಡಿ ಅಧ್ಯಕ್ಷರನ್ನು ಚುನಾವಣೆ ಮಾಡಿ ನಾಲ್ಕು ವರ್ಷಗಳಷ್ಟು ಅವಧಿಯಲ್ಲಿ ಅವರು ಅಧ್ಯಕ್ಷರಾಗಿರಬೇಕೆಂದು ಮಾಡಿರುವಾಗ ಅವರನ್ನು ಒಂದು ವರ್ಷವಾದ ಮೇಲೆ ಇಳಿಸುವುದು ಎಂದರೆ ಸರಿಯಾಗಿರುವುದಿಲ್ಲ. ಈ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರಿಗೆ ಸಂಬಳ ಬರುತ್ತದೆ ಎಂದು ಮಾಡಿದ ಮೇಲೆ ಅವು ಮಾರಾಟವಾಗುವಂತೆ, ಗುತ್ತಿಗೆಗೆ ಕೊಟ್ಟಂತೆ ಮಾಡಬೇಕೇನು ? ಇದರಿಂದ ಎಲ್ಲಾ ನಗರ ಸಭೆಗಳಲ್ಲಿಯೂ ಭ್ರಷ್ಟಾಚಾರಗಳು ಹೆಚ್ಚಲಿಕ್ಕೆ ದಾರಿಯಾಗಿವೆ. ನನ್ನ ಮಿತ್ರರಾಗಿದ್ದು ನನ್ನ ಜೊತೆಯಲ್ಲಿಯೇ ಇದ್ದು ನನ್ನ ಪಾರ್ಟಿಗೆ ಸೇರಿದ್ದವರನ್ನು ಆಳುವ ಪಕ್ಷದವರು ಅವರನ್ನು ಪ್ರೆಸಿಡೆಂಟು ಮಾಡುತ್ತೇನೆಂದು ಹೇಳಿ ಅವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡರು. ಹೀಗೆ ಶಿವಮೊಗ್ಗದಲ್ಲಿ ನನ್ನ ಪಾರ್ಟಿಯಲ್ಲಿದ್ದ ಬಹುಭಾಗದ ಸದಸ್ಯರನ್ನು ಕಾಂಗ್ರೆಸ್ ಪಕ್ಷಕ್ಕೆ ಕದ್ದಿದ್ದಾರೆ. ಇದರ ವಿಚಾರವನ್ನು ಬೇಕಾದರೆ ಮಾನ್ಯ ಸದಸ್ಯೆಯರಾದ ಶ್ರೀಮತಿ ರತ್ನಮ್ಮನವರನ್ನೂ ಕೇಳಬಹುದು.

ಶ್ರೀಮತಿ ರತ್ನಮ್ಮ ಮಾಧವರಾವ್.—ನಾವು ಕದಿಯಲಿಲ್ಲ. ಅವರಾಗಿಯೇ ನಮ್ಮ ಪಾರ್ಟಿಗೆ ಬಂದು ಸೇರಿದರು.

5-00 P.M.

ಶ್ರೀ ಎಸ್. ಗೋಪಾಲ ಗೌಡ.—ಹೀಗೆ ನಾವು ಕಷ್ಟಪಟ್ಟು ಅವರನ್ನು ಚುನಾವಣೆಗೆ ನಿಲ್ಲುವಂತೆ ಮಾಡಿ ಮುನಿಸಿಪಲ್ ಸದಸ್ಯರನ್ನಾಗಿ ನಮ್ಮ ಪಕ್ಷದಿಂದ ಆರಿಸಿದ್ದ ಕೆಲವರನ್ನು ಆಡಳಿತ ಪಕ್ಷದವರು ವರ್ಷವರ್ಷಕ್ಕೆ ಸೇರಿಸಿಕೊಂಡರೆ ಇದರಿಂದ ಲೋಪದೋಷಗಳು ನಿವಾರಣೆಯಾದಂತಾಗುತ್ತದೆಯೇ? ನಮ್ಮ ಜೊತೆಯಲ್ಲಿಯೇ ಇದ್ದು ವಾಸಮಾಡುತ್ತಿದ್ದಂತಹವರನ್ನು ರಾತ್ರೋರಾತ್ರಿ ಶಿವಮೊಗ್ಗದಿಂದ ಬೆಂಗಳೂರಿಗೆ ಕರೆಸಿಕೊಂಡು ಅವರಿಗೆ ಅಧ್ಯಕ್ಷ ಪದವಿ ಕೊಡುತ್ತೇವೆಂದು ಕೊಟ್ಟರು ಮತ್ತು ಅವರನ್ನು ಕೆಳಕ್ಕಿಳಿಸಿ ಈಗ ಅವರು ಅತೋಭ್ರಷ್ಟ ತತೋಭ್ರಷ್ಟರಾಗಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಒಂದು ಸಲ ಆರಿಸಿ ಬಂದ ಮೇಲೆ ಅವರಿಗೆ ಬಹುಮತ ಸದಸ್ಯರು ಬೆಂಬಲ ಕೊಡಬೇಕು. ಮತ್ತು ಅವರು ಪೂರ್ತಿ ಅವಧಿಯವರೆಗೆ ಕೆಲಸ ಮಾಡಲು ಅವಕಾಶವಿರಬೇಕು. ಕಾನೂನಿನ ಪ್ರಕಾರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಅವರ ಅವಧಿಯ ಪೂರ್ತಿ ಕಾಲದಲ್ಲಿ ಕೆಲಸ ಮಾಡಲು ಸಹಾಯ ಮಾಡಬೇಕೇ ವಿನಾ ಅವರ ಆಡಳಿತದಲ್ಲಿ ಸರಕಾರ ಕೈಹಾಕುವಂತಿರಬಾರದು. ಈಗ ಸರಕಾರದವರು ತೊಂದರೆ ಕೊಡುತ್ತಿರುವ ಎಷ್ಟೋ ಮುನಿಸಿಪಾಲಿಟಿಗಳಿವೆ. ತಾಲ್ಲೂಕು ಬೋರ್ಡುಗಳಲ್ಲಿ ಹಾಗೂ ಇನ್ನಿತರ ಸಂಸ್ಥೆಗಳಲ್ಲಿ ತಮ್ಮ ಪಾರ್ಟಿಯವರಿಗೆ ಇಂತಹ ಸ್ಥಾನಮಾನಗಳನ್ನು ಕಲ್ಪಿಸಿ ಕೊಡಬೇಕು ಎನ್ನುವ ಉದ್ದೇಶದಿಂದ ಕಾನೂನಿನಲ್ಲಿ ಮೂರು ವರ್ಷಗಳ ಅವಧಿಯಂತಿದ್ದುದನ್ನು ಒಂದು ವರ್ಷಕ್ಕೆ ಇಳಿಸುವಂತೆ ಮಾಡುವುದು ಶುದ್ಧ ಹಾಸ್ಯಾಸ್ಪದ ಮತ್ತು ಅರ್ಥಹೀನವಾದುದು. ಯಾವಾಗ ಮುನಿಸಿಪಲ್ ಅಧ್ಯಕ್ಷರನ್ನು ಚುನಾಯಿಸಿ ಒಂದು ಅವಧಿಯವರೆಗೆ ಅವರು ಕೆಲಸ ಮಾಡಬೇಕೆಂದು ಇರುವುದನ್ನು ಬದಲಾಯಿಸಿ ಇವರ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಬೇಕು ಎಂದು ಮಾಡುವುದು ಯಾವ ನೀತಿ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ............

ಶ್ರೀ ಕೆ. ಪುಟ್ಟಸ್ವಾಮಿ.—ಬಹುತೇಕ ಒಬ್ಬ ಅಧ್ಯಕ್ಷರನ್ನಾಗಲೀ, ಉಪಾಧ್ಯಕ್ಷರನ್ನಾಗಲೀ ಚುನಾಯಿಸಿದ ಮೇಲೆ ಅವರ ಅವಧಿಯನ್ನು ಮೊಟಕು ಮಾಡಬೇಕು ಎಂಬುದೇನೂ ಇದರಲ್ಲಿ ಬರುವುದಿಲ್ಲ. ಒಂದು ಪೌರಸಭೆಯಲ್ಲಿ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಒಂದು ವರ್ಷಕ್ಕೇ ಅವರ ಪದವಿಯಿಂದ ಇಳಿಸಬೇಕು ಎನ್ನುವ ಅಪೇಕ್ಷೆ ಇದ್ದರೆ ಆ ಸಭೆಯವರು ಅದಕ್ಕೆ ಮುಂಚಿತವಾಗಿ ಒಂದು ನಿರ್ಣಯವನ್ನು ಮಾಡಿ ಸರಕಾರಕ್ಕೆ ಕಳುಹಿಸಿ ಅನುಮತಿ ಪಡೆದು ಅವರನ್ನು ಒಂದು ವರ್ಷಕ್ಕೇ

ಪದವಿಯಿಂದ ಇಳಿಯುವಂತೆ ಮಾಡಬಹುದು. ನಾಲ್ಕು ವರ್ಷಗಳ ಕಾಲ ಎಂದು ಆ ಒಂದು ಅವಧಿಗೆ ಚುನಾಯಿಸಿದ ಮೇಲೆ ಒಂದು ವರ್ಷಕ್ಕೆ ಅವರ ಅವಧಿಯನ್ನು ಇಳಿಸಬೇಕು ಎನ್ನುವ ತಿದ್ದುಪಡಿ ಇಲ್ಲಿ ಬಂದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ತಮ್ಮ ಅಭಿಪ್ರಾಯಗಳು ಇಂಪೋರ್ಟೆಡ್ ಆಗಿರುವಂತಹವು ಎಂದು ನಾನು ಇಲ್ಲಿ ಹೇಳಬೇಕಾಗುತ್ತದೆ. ತಾವು ಮೈಸೂರು ನಗರಸಭೆಯಲ್ಲಿದ್ದು ಅನುಭವ ಪಡೆದಿರುವುದರಿಂದ ಅನಾವಶ್ಯಕವಾಗಿ, ವಿನಾಕಾರಣವಾಗಿ ಇಂತಹ ಗೊಂದಲಗಳಿಗೆ ಈ ಮಸೂದೆಯಲ್ಲಿ ಏಕೆ ಅವಕಾಶ ಕಲ್ಪಿಸಿದ್ದೀರಿ ? ನಾಲ್ಕು ವರ್ಷಕಾಲ ನಗರ ಸಭೆಗೆ ಒಂದು ಸಾರಿ ಚುನಾವಣೆಯನ್ನು ಮಾಡಿದ ಮೇಲೆ ಅಲ್ಲಿರುವ ಬಹುಮತ ಪಕ್ಷದವರು ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸುತ್ತಾರೆ. ಎಲ್ಲಿಯತನಕ ಅವರು ಬಹುಮತದ ಸದಸ್ಯರ ವಿಶ್ವಾಸವನ್ನು ಸಂಪಾದಿಸುತ್ತಾರೋ ಅಲ್ಲಿಯವರಿಗೆ ಅವರೂ ಪೂರ್ತಿಯಾಗಿ ಅಲ್ಲಿನ ಕೆಲಸಗಳನ್ನು ಮಾಡಲು ಅವಕಾಶವಿರಬೇಕು. ಆದರೆ ಇಲ್ಲಿರುವ ನಾನಾ ವಿಧಿಗಳನ್ನು ನೋಡಿದರೆ ಅವರ ಅಧಿಕಾರವನ್ನು ಮೊಟಕು ಮಾಡುತ್ತಿರುವುದು ಚೆನ್ನಾಗಿ ಗೋಚರವಾಗುತ್ತಿದೆ. ಇದರಲ್ಲಿರುವ ಸಬ್-ಕ್ಲಾಜ್ 11 ರಲ್ಲಿ:

" (i) a period of two years from the date of election in the case of a town municipal councillor his term as a councillor, whichever is earlier;......'

ಇಂದು ಇಲ್ಲಿ ತಿದ್ದುಪಡಿಯನ್ನು ತಂದಿರುವುದು ಏತಕ್ಕಾಗಿ ಇಂತಹ ತಿದ್ದುಪಡಿಯಿಂದ ಈ ಮಸೂದೆಯಲ್ಲಿ ಗೊಂದಲಕ್ಕೇಕೆ ಆಸ್ಪದಮಾಡುತ್ತೀರಿ ? ಅಧ್ಯಕ್ಷರು, ಉಪಾಧ್ಯಕ್ಷರು, ಮುನಿಸಿಪಾಲಿಟಿಯ ಸದಸ್ಯರುಗಳನ್ನು ಹೀಗೆ ಆಳುವ ಪಕ್ಷದ ಕೈಗೊಂಬೆಗಳಾಗಿ ಮಾಡುವುದಕ್ಕೆ ಏಕೆ ಹೊರಟಿದ್ದೀರಿ ? ಒಂದುಕಡೆ ಚುನಾಯಿತ ಸದಸ್ಯರು ಇರಬೇಕೆಂದು ಮಾಡಿ, ಅವರಿಗೆ ಸ್ಥಾನಮಾನಗಳನ್ನು ಕೊಡಬೇಕೆಂದು ಹೇಳುತ್ತ ಇನ್ನೊಂದು ಕಡೆ ಎಲ್ಲಾ ಅಧಿಕಾರಿಗಳನ್ನೂ, ಸ್ವಾತಂತ್ರ್ಯವನ್ನೂ ಸರಕಾರ ಕಸಿದುಕೊಂಡರೆ ಅವರಿಂದ ಯಾವ ಕೆಲಸವನ್ನು ತಾನೇ ಮಾಡಲು ಸಾಧ್ಯ ? ಸರಕಾರದವರು ಇಂತಹ ಪದವಿಗಳನ್ನು ಮಾರಾಟ ಮಾಡುದಕ್ಕೆ ಹೊರಟಿದ್ದಾರೆ. ಹೀಗೇಕೆ ಮಾಡುತ್ತೀರಿ ? ನಾನು ಈ ಮಸೂದೆಯನ್ನು ಓದುವಾಗ, ಏನೋ ಪರವಾಗಿಲ್ಲ ಬಹುಕಷ್ಟಪಟ್ಟು ಸಾಧನೆಮಾಡಿ ಬಹಳ ಗೊಂದಲವಿಲ್ಲದಂತೆ ನಗರಸಭೆಗಳಿಗೆ ಇನ್ನೂ ಹೆಚ್ಚಿನ ಜೀವಕಳೆ ತುಂಬಿ ಅವುಗಳು ಉತ್ತಮವಾಗುವಂತೆ ಮಸೂದೆಯನ್ನು ತರುತ್ತಾರೆಂದು ತಿಳಿದುಕೊಂಡಿದ್ದೆ. ವೈಯಕ್ತಿಕವಾಗಿ ಮಾನ್ಯಮಂತ್ರಿಗಳು ಹೀಗೆ ಮಾಡುತ್ತಾರೆ ಎನ್ನುವ ನಂಬಿಕೆಯೂ ಇತ್ತು. ಆದರೆ ಈಗ ಈ ಮಸೂದೆಯನ್ನು ಓದಿದ ಮೇಲೆ ಮತ್ತು ಈಚೆಗೆ ಇಲ್ಲಿ ಬಂದಿರುವ ರಿಪೋರ್ಟನ್ನು ಓದಿದಮೇಲೆ ಬಹಳ ವ್ಯತ್ಯಾಸವಾಗಿರುವುದು ಕಂಡುಬರುತ್ತಿದೆ. ಹೊಸ ಹೊಸ ತಿದ್ದುಪಡಿಗಳನ್ನು ಇಲ್ಲಿ ಅವಸರವಸರವಾಗಿ ತಂದು ಇದನ್ನು ಮುಗಿಸಿಬಿಡಬೇಕೆಂದು ಮಾಡುತ್ತಿದ್ದಾರೆ. ಈ ಮಸೂದೆಯಿಂದ ಪೌರಸಭೆಗಳ ಮತ್ತು ನಗರ ಸಭೆಗಳ ಜವಾಬುದಾರಿಗಳಲ್ಲಿ ಬಹಳ ದೊಡ್ಡ ಗೊಂದಲವಾಗುವಂತೆ ಮಾಡಿದ್ದಾರೆ. ಈಗಲೂ ಸರಕಾರಕ್ಕೆ ಸಮಯವಿದೆ. ಇದನ್ನು ಬೇಕಾದರೆ ಪುನಃ ವಾಪಸು ತೆಗೆದುಕೊಂಡು ಇದರಲ್ಲಿ ಇನ್ನೂ ಏನೇನು ತಿದ್ದುಪಡಿಗಳನ್ನು ತರಬಹುದು ಎನ್ನುವುದನ್ನು ಸರಿಯಾಗಿ ಕುಳಿತು ವಿಚಾರಮಾಡಿ ತರುವುದು ಸೂಕ್ತ. ಅಲ್ಲದೆ ಅವರ ವಿಷಯವಾಗಿ ಅವರ ಪಾರ್ಟಿಯಲ್ಲಿಯೂ ಚರ್ಚೆಮಾಡಿಲ್ಲವೆಂದು ನನಗೆ ಗೊತ್ತಾಗಿದೆ. ತಮಗೂ ಗೊತ್ತಿರುವಂತೆ ಕಾಂಗ್ರೆಸ್ಸು ಪಕ್ಷದಲ್ಲಿಯೂ ಕೂಡ ಇದರಲ್ಲಿ ತಪ್ಪಾಗಿದೆ ಎಂದು ಹೇಳುವುದಕ್ಕೆ ಅವಕಾಶ ಇದೆ. ಸೆಲೆಕ್ಟು ಕಮಿಟಿಯಲ್ಲಿ ವಿರೋಧಮಾಡಿದಂತಹ ಸದಸ್ಯರು ಇದರಲ್ಲಿ ಡಿಸ್ಸೆಂಟಿಂಗ್ ನೋಟನ್ನು ಕೂಡ ಕೊಟ್ಟಂತೆ ಕಾಣುವುದಿಲ್ಲ.

ಮೊದಲೇ ಇದರ ಹೆಸರು ಮುನಿಸಿಪಾಲಟಿ. ಒಂದು ಗೊಂದಲ ಮಸೂದೆಯಾಗಿ ಬರಲು ಸಾಧ್ಯವಾಗಿದೆ. ಹೀಗೆ ಅಂಗೀಕಾರ ಮಾಡುವಾಗಲೇ ಈ ರೀತಿ ಮಾಡಿದರೆ ಮುಂದೆ ದೊಡ್ಡ ದೊಡ್ಡ ಲೋಪದೋಷಗಳಿಗೆ ಅವಕಾಶಮಾಡಿಕೊಟ್ಟಂತೆ ಆಗುತ್ತದೆ. ಆದುದರಿಂದ ತಾವು ಇದನ್ನು ಇನ್ನೊಮ್ಮೆ ಓದಿ ಸರಿಯಾದ ಮಾರ್ಗದರ್ಶನವಾಗುವಂತೆ ಮಾಡಬೇಕು. ಕಾನೂನು ದೃಷ್ಟಿಯಿಂದಲೇನೋ ಈಗ ಇದನ್ನು ಒಪ್ಪಿಬಿಡುತ್ತಾರೆ. ಮುನಿಸಿಪಲ್ ಆಡಳಿತದ ದೃಷ್ಟಿಯಿಂದ ತಾವು ನೋಡಬೇಕು ಎಷ್ಟೋ ಗೊಂದಲಗಳಿವೆ. ಬೇಕಾದರೆ ಒಂದುನೂರನ್ನು ಇಲ್ಲಿ ತೋರಿಸುತ್ತೇನೆ. ತಾವು ಇದರೊಳಗೆ ಇನ್ನೊಂದಂಶವನ್ನು ತಂದಿದ್ದೀರಿ. ಪ್ರತಿಯೊಂದು ಕೆಲಸಕ್ಕೂ with the consent of the Government ಎಂದು ಮಾಡಿದ್ದಾರೆ. ಒಂದುಸಾವಿರ ರೂಪಾಯಿಗಳಷ್ಟು ಹಣವನ್ನು ನಗರಸಭೆ ಖರ್ಚುಮಾಡುವಾಗ ಹಾಗೂ ಒಬ್ಬ ಅಗಸನಿಗೆ ಜನಗಳ ಬಟ್ಟೆ ಒಗೆಯಲು ಜಾಗಕೊಡಬೇಕಾದರೆ with the consent of the Govermment ಎಂದು ಪ್ರತಿಸಾರಿಯೂ ಸರಕಾರವನ್ನು ಕೇಳಿ

(ಶ್ರೀ ಎಸ್. ಗೋಪಾಲಗೌಡ)

ಕೊಂಡಿರಬೇಕು. ಮುನಿಸಿಪಾಲಿಟಿಯವರು ಒಂದು ಕೆರೆ ಅಥವಾ ಬಾವಿ ರಿಪೇರಿ ಮಾಡಿಸಿಕೊಡುವಾಗ ಸರಕಾರದ ಅಪ್ಪಣೆ ಕೇಳಬೇಕು. ನಾನು ಮಾನ್ಯ ಪುಟ್ಟಸ್ವಾಮಿಯವರಲ್ಲಿ ಅರಿಕೆಮಾಡಿಕೊಳ್ಳುವುದೇನೆಂದರೆ ದಯೆಯಿಟ್ಟು ಅವರ ಅಧಿಕಾರವನ್ನು ಅವರಿಗೆ ಕೊಡುವುದಕ್ಕೆ; ಅವರ ಅಧಿಕಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಆತಂಕ, ಭಯ ಇರಬಾರದು, ಅವರ ಬಗ್ಗೆ ಶಂಕೆ ಇರಬಾರದು. ಜನರಿಂದ ಆರಿಸಿಬಂದವರು ತಪ್ಪು ಮಾಡಿದರೆ ಅವರು ಇನ್ನೊಂದುಸಲ ಚುನಾಯಿತರಾಗುವುದಿಲ್ಲ. ಅವರಿಗೆ ತಪ್ಪುತಿದ್ದಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಹತ್ತು ಜನ ಇರುವಕಡೆ ದೇವರು ಇರುತ್ತಾನೆ ಎಂದು ಹೇಳುತ್ತಾರೆ; ಆದ್ದರಿಂದ ಅವರಿಗೆ ಸರಿಯಾದ ಮಾರ್ಗದರ್ಶನವಿದ್ದು ಸಾಮಾನ್ಯವಾಗಿ ತಪ್ಪು ಮಾಡುವುದಿಲ್ಲ. ಯಾರಿಗೂ ಅಧಿಕಾರವನ್ನು ಕೊಡುವುದಿಲ್ಲ, ಎಲ್ಲವನ್ನೂ ಅಠಾರ ಕಛೇರಿಯಿಂದ, ವಿಧಾನಸೌಧದಿಂದ ಚಲಾಯಿಸುತ್ತೇವೆ ಎಂದು ಹೇಳುತ್ತೀರ, ಇದು ವಿಕೇಂದ್ರೀಕರಣ ತತ್ವಕ್ಕೆ ವಿರುದ್ಧವಾದ ಮಸೂದೆಯಾಗಿದೆ. ಈಗಿರುವ ಮಸೂದೆಯನನೋಡಿದರೆ ಅದನ್ನು ವಿರೋಧಿಸಲೇ ಬೇಕಾಗಿದೆ. ಇದನ್ನು ಪಾಸ್ ಮಾಡಿದರೆ ಅನಾಹುತಕ್ಕೆ ಈಡಾಗುತ್ತದೆಂದು ಹೇಳಿ ನಾನು ಈ 42ನೆಯ ವಿಧಿಗೆ ಮಾನ್ಯಸಚಿವರು ಏನು ತಿದ್ದುಪಡಿಯನ್ನು ತಂದಿದ್ದಾರೆ ಅದನ್ನು ವಿರೋಧ ಮಾಡುತ್ತೇನೆ. ನಾನು ಹೇಳಿದ ಕೆಲವು ಲೋಪದೋಷಗಳನ್ನು ತಿದ್ದುಪಡಿಮಾಡಿದರೆ ಮಾತ್ರ ಈ ಮಸೂದೆ ಅಂಗೀಕಾರಾರ್ಹವಾಗುತ್ತದೆ.

ಶ್ರೀ ಸಿ. ವಿ. ವೆಂಕಟರಾಯಪ್ಪ :—

ಸ್ವಾಮಿ, ನಾನು ಕ್ಲಾಜು 42(1)ಕ್ಕೆ ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಪ್ರತಿಯೊಂದು ಮುನಿಸಿಪಲ್ ಕೌನ್ಸಿಲ್ಲಿಗೂ ಒಬ್ಬ ಪ್ರೆಸಿಡೆಂಟು, ವೈಸ್-ಪ್ರೆಸಿಡೆಂಟು ಇರಲೇಬೇಕೆಂದು ಈ ಮಸೂದೆಯಲ್ಲಿ ನಮೂದಾಗಿದೆ. ಹಿಂದಿನ ಆಕ್ಟಿನಲ್ಲಿ ಪ್ರತಿಯೊಂದು ಮುನಿಸಿಪಲ್ ಕೌನ್ಸಿಲ್ಲಿಗೂ ಒಬ್ಬ ಪ್ರೆಸಿಡೆಂಟು ಇರಬೇಕು, ಒಂದುವೇಳೆ ಕಾನ್ಸಿಲ್ಲು ಅಭಿಪ್ರಾಯಪಟ್ಟರೆ ವೈಸ್-ಪ್ರೆಸಿಡೆಂಟು ಇರಬೇಕು. ಎಂದು ಇತ್ತು. ಅದನ್ನು ತೆಗೆದುಹಾಕಿ ಈಗ ಪ್ರತಿಯೊಂದು ಮುನಿಸಿಪಲ್ ಕೌನ್ಸಿಲ್ಲಿಗೂ ಪ್ರೆಸಿಡೆಂಟು-ವೈಸ್-ಪ್ರೆಸಿಡೆಂಟ್ ಇರಬೇಕೆಂದು ನಮೂದಿಸಿದ್ದಾರೆ. ಸಿಟಿ ಮುನಿಸಿಪಾಲಿಟಿ ಮತ್ತು ಟೌನ್‌ಮುನಿಸಿಪಾಲಿಟಿಗಳಿಗೆ ಒಂದೇ ಆಕ್ಟುಮಾಡಿರುವುದರಿಂದ, ಎರಡಕ್ಕೂ ಅನ್ವಯವಾಗುವಂತ ಈ ರೀತಿ ಮಾಡಿರಬಹುದು. ಟೌನ್ ಮುನಿಸಿಪಾಲಿಟಿಯಲ್ಲಿ ಇರುವ ಪರಿಸ್ಥಿತಿಗೂ ಸಿಟಿ ಮುನಿಸಿಪಾಲಿಟಿಯಲ್ಲಿರುವ ಪರಿಸ್ಥಿತಿಗೂ ವ್ಯತ್ಯಾಸವಿದೆ. ಅವುಗಳ ವಿಸ್ತೀರ್ಣ, ಪ್ರಜಾಸಂಖ್ಯೆ ಕೆಲಸಗಳು, ಸದಸ್ಯರು ಮತ್ತು ಪ್ರೆಸಿಡೆಂಟರ ಅನುಭವದಲ್ಲಿ ಬಹಳ ವ್ಯತ್ಯಾಸವಿದೆ. ಮೊದಲಿನಿಂದಲೂ ಎರಡು ಕೌನ್ಸಿಲ್ಲುಗಳಿಗೂ ಬೇರೆ ಬೇರೆ ಆಕ್ಟು ಇತ್ತು ಈಗ ಒಂದೇ ಆಗಿದೆ. ನಗರ ಸಭೆಗಳ ಆಡಳಿತದಲ್ಲಿ ಅನುಭವವಿರತಕ್ಕಂಥ ಮಿನಿಸ್ಟರುಗಳು ಡೆಪ್ಯುಟಿ ಮಿನಿಸ್ಟರುಗಳು ಸೇರಿಕೊಂಡು, ನಗರಸಭೆಗಳ ದೃಷ್ಟಿಯಿಂದ ಮಾತ್ರ ಹೀಗೆ ಮಾಡಿದ್ದಾರೆ; ಟೌನ್ ಮುನಿಸಿಪಾಲಿಟಿಗಳು ಹೇಗೆ ನಡೆಯುತ್ತಿವೆ, ಅವುಗಳ ಸ್ಥಿತಿಗತಿ, ಕೆಲಸಕಾರ್ಯಗಳು ಏನು ಎನ್ನುವುದು ಯಾವುದೂ ದೃಷ್ಟಿಯಲ್ಲಿಲ್ಲದೆ ಮಾಡಿದ್ದಾರೆ ಪ್ರತಿಯೊಂದು ಎಂಬುದು ಸೆಕ್ಷನ್ನನ್ನು ನೋಡಿದರೆ ಭಾಸವಾಗುತ್ತದೆ ಈ ದೃಷ್ಟಿಯಿಂದ ಇಂಥ ಪ್ರಕರಣಗಳನ್ನು ತಂದರೆ ಟೌನ್ ಮುನಿಸಿಪಾಲಿಟಿಗಳು ಉದ್ಧಾರವಾಗುವುದಿಲ್ಲ. ಈಗಈ ಮಸೂದೆಯ ಪ್ರಕಾರ ಟೌನ್ ಮುನಿಸಿಪಲ್ ಅಧ್ಯಕ್ಷರಿಗೆ ಏನು ಅಧಿಕಾರವೂಇಲ್ಲ, ಯಾವ ಅಧಿಕಾರವೂ ಇಲ್ಲ, ಎಲ್ಲಾ ಚೀಫ್ ಆಫೀಸರಿಗೆ ಕೊಟ್ಟಿದ್ದಾರೆ. ಚೀಫ್ ಆಫೀಸರಿಗೆ ಮುಕ್ಕಾಲುವಾಸಿ ಅಧಿಕಾರ ಕೊಟ್ಟಿದ್ದಾರೆ. ಸಿಟಿ ಮುನಿಸಿಪಾಲಿಟಿಗಳಲ್ಲಿ ಚೀಫ್ ಎಕ್ಸಿಕ್ಯೂಟಿವ್ ಡೆಪ್ಯುಟಿ ಕಮೀಷನರ್ ಗ್ರೇಡಿನವರು ಇರುತ್ತಾರೆ. ಅದನ್ನೊಂದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸಿಟಿ ಮುನಿಸಿಪಲ್ ಕಮೀಷನರಿಗೆ ಕೊಟ್ಟಿರುವ ಅಧಿಕಾರವನ್ನೇ ಸ್ವಲ್ಪ ಹೆಚ್ಚುಕಡಮೆ ಟೌನ್ ಮುನಿಸಿಪಾಲಿಟಿ ಚೀಫ್ ಆಫೀಸರಿಗೂ ಕೊಟ್ಟಿರುತ್ತಾರೆ. ಕೌನ್ಸಿಲ್ಲಿಗೆ ಎಲ್ಲೋ ಅಲ್ಪಸ್ವಲ್ಪ ಅಧಿಕಾರವಿದೆ. ಪ್ರತಿಯೊಂದು ಸೆಕ್ಷನ್ನಿನಲ್ಲಿಯೂ ಜವಾಬ್ದಾರಿಯನ್ನು ಡೆಪ್ಯುಟಿ ಕಮಿಷನರಿಗೆ ಕೊಟ್ಟಿದೆ. ಹೀಗೆ ಅಧ್ಯಕ್ಷರಿಗೆ ಏನೂ ಕೆಲಸವಿಲ್ಲದೆ ಇರುವಾಗ for any municipal counicil there shall be a President and a Vice-President ಎಂದು ಬಲಾತ್ಕಾರದಿಂದ ಹೇಳುವುದರಲ್ಲಿ ಅರ್ಥವೇನು ? ಇದು ಏತಕ್ಕೆ ಬೇಕಿತ್ತು ? ಪ್ರೆಸಿಡೆಂಟರಿಗೆ 200 ರೂಪಾಯಿ ಸಂಬಳ, ವೈಸ್-ಪ್ರೆಸಿಡೆಂಟರಿಗೆ 100 ರೂಪಾಯಿ ಸಂಬಳ. ವೈಸ್-ಪ್ರೆಸಿಡೆಂಟಿಗೆ ಪವರ್ಸ್ ಸಿಟಿ ಮುನಿಸಿಪಾಲಿಟಿಯಲ್ಲಿಯೂ ಇಲ್ಲ, ಟೌನ್ ಮುನಿಸಿಪಾಲಿಟಿಯಲ್ಲಿಯೂ ಇಲ್ಲ. ಏನಾದರೂ ಅಧಿಕಾರವನ್ನು ಪ್ರೆಸಿಡೆಂಟರು ಡೆಲಿಗೇಟ್ ಮಾಡಿದರೆ, ಆವಾಗ ವೈಸ್-ಪ್ರೆಸಿಡೆಂಟರು ಚುನಾವಣೆ ಮಾಡುವುದಕ್ಕೆ ಅಧಿಕಾರವಿದೆ. ಪ್ರೆಸಿಡೆಂಟರಿಗೇ ಅಧಿಕಾರ ವಿಲ್ಲದಿರುವಾಗ, ಆ ಅಪ್ಪ ಈ ವೈಸ್-ಪ್ರೆಸಿಡೆಂಟಿಗೆ ಡೆಲಿಗೇಟ್ ಮಾಡುವುದು ಏನು ? ಈಗ ಮಾರ್ಪಾಡು ಮಾಡಿ ಸರ್ಕಾರ ತಂದಿರುವ ಕ್ಲಾಜಿನಿಂದ ವ್ಯಥಾಖರ್ಚು. ಹಿಂದೆ ಇದ್ದ ಕ್ಲಾಜೇ ಇದ್ದರೆ ಏನು ತೊಂದರೆ ಇತ್ತು ? ಏನು ಬಾಧೆಯಾಗುತ್ತಿತ್ತು ? ವೈಸ್-ಪ್ರೆಸಿಡೆಂಟನ್ನು ನಿರ್ಬಂಧ

ವಾಗಿ ಇಟ್ಟುಕೊಳ್ಳಬೇಕಾದ ಪ್ರಸಂಗ ಏನಿದೆ? ಈಗ ಚಿಕ್ಕಬಳ್ಳಾಪುರ ಮುನಿಸಿಪಾಲಿಟಿಯಲ್ಲಿ ವೈಸ್-ಪ್ರೆಸಿಡೆಂಟ್ ಇಲ್ಲ. ಆ ಕೌನ್ಸಿಲ್ ಇಷ್ಟಪಟ್ಟರೆ ಇಟ್ಟುಕೊಳ್ಳಬಹುದು. ಅವರು ಇಟ್ಟುಕೊಳ್ಳಲೇ ಬೇಕು ಎಂದು ಏಕೆ ಒತ್ತಾಯಮಾಡಬೇಕು ? If the Municipal Council so denies with the sanction of the Government, Vice-President ಅನ್ನು ಇಟ್ಟುಕೊಳ್ಳಬಹುದು ಎಂದು ಹಿಂದೆ ಇದ್ದದನ್ನು ಈಗ ಏಕೆ ತೆಗೆದುಹಾಕಿದಿರಿ ? ಹಿಂದಿನ ಪರಿಸ್ಥಿತಿಗೂ, ಈಗ ಮುಂದೆ ಬರುವುದಕ್ಕೂ ವ್ಯತ್ಯಾಸವಿದೆ. ಇದುವರೆಗೆ ಪ್ರೆಸಿಡೆಂಟರಿಗೆ ಕೆಲಸವಿತ್ತು, ಚೀಫ್ ಆಫೀಸರ ಮೇಲೆ ಪ್ರೆಸಿಡೆಂಟರಿಗೆ ಕಂಟ್ರೋಲ್ ಇತ್ತು, ಈಗ ಪ್ರೆಸಿಡೆಂಟಿಗೆ ಕೆಲಸ ಜಾಸ್ತಿ ಇತ್ತು. ಈಗ ಪ್ರೆಸಿಡೆಂಟರಿಗೆ ಏನೂ ಅಧಿಕಾರವಿಲ್ಲದಂತೆ ಮಾಡಿರುವಾಗ, ಇನ್ನು ವೈಸ್-ಪ್ರೆಸಿಡೆಂಟ್ ಮಾಡುವುದೇನು ? ವೈಸ್-ಪ್ರೆಸಿಡೆಂಟಿಗೆ ಒಂದು ಕಾಗದವೂ ಬರುವುದಿಲ್ಲ. ಹಿಂದಿನ ಆಕ್ಟಿನಲ್ಲಿರುವುದು ಸರಿಯಾಗಿದೆ, ಅದನ್ನು ಒಪ್ಪಿಕೊಂಡರೆ ಚೆನ್ನಾಗಿರುತ್ತದೆ. ಮೇಲಿನ ಅಂತಸ್ತಿನಲ್ಲಿ ಕುಳಿತುಕೊಂಡು ನೋಡುವುದನ್ನು ಬಿಡಿ, ಕೆಳಗೆ ಇಳಿದು ಕೆಳಗಿನ ದೃಷ್ಟಿಯಿಂದ ನೋಡಿದರೆ ಉತ್ತಮ ಎಂದು ಕಾಣುತ್ತದೆ. ಸಬ್-ಕ್ಲಾಜು 4, 5, 7, 12 ರಲ್ಲಿ ಪ್ರೆಸಿಡೆಂಟ್ ಮತ್ತು ವೈಸ್-ಪ್ರೆಸಿಡೆಂಟ್ ವೇಕೆನ್ಸಿ ಆದಾಗ ಆ ಸ್ಥಾನಕೆ ಬರಲು ಅವಕಾಶವಿಲ್ಲದೆ ಇದ್ದಾಗ ಆ ಸ್ಥಾನಗಳನ್ನು ಹೇಗೆ ಭರ್ತಿ ಮಾಡಬೇಕು, ಪ್ರೆಸಿಡೆಂಟರ ಕೆಲಸ ವನ್ನು ಯಾರು ನೆರವೇರಿಸಬೇಕು ಇತ್ಯಾದಿ ವಿಷಯಗಳು ಇವೆ. ಒಂದು ವೇಳೆ ಪ್ರೆಸಿಡೆಂಟ್ ಇಲ್ಲದೆ ಇದ್ದಾಗ ಸೆಕ್ಷನ್ 5 ರ ಪ್ರಕಾರ ಸಿಟಿ ಮುನಿಸಿಪಾಲಿಟಿ ಇರುವಲ್ಲಿ ಡೆಪ್ಯುಟಿ ಕಮೀಷನರು ಇರುತ್ತಾರೆ ಅಸಿಸ್ಟೆಂಟ್ ಕಮೀಷನರು ಇರುತ್ತಾರೆ. ಟೌನ್ ಮುನಿಸಿಪಾಲಿಟಿಗಳಲ್ಲಿ ಅಸಿಸ್ಟೆಂಟ್ ಕಮಿಷನರು ಇಲ್ಲದೆ ಇರುವಾಗ ತಹಸೀಲ್‌ದಾರರು ಪ್ರೆಸಿಡೆಂಟರ ಚಾರ್ಜಿನಲ್ಲಿರುವುದಕ್ಕೆ ಅವಕಾಶ ಇದೆ. ಸಬ್ ಕ್ಲಾಜು 4 ರಲ್ಲಿ ಒಂದು ವೇಳೆ ಪ್ರೆಸಿಡೆಂಟರು ಅವರ ಸ್ಥಾನಕ್ಕೆ ಎಲೆಕ್ಟ್ ಆಗಿ ಬರುವುದಕ್ಕೆ ಅವಕಾಶ ವಿಲ್ಲದೆ ಇರುವಾಗ ಯಾರು ಅವರ ಕರ್ತವ್ಯವನ್ನು ನಿರ್ವಹಿಸಬೇಕೆಂಬ ಬಗ್ಗೆ ಅನಿಶ್ಚಿತವಿದೆ. ಆದ್ದರಿಂದ ಒಂದು ಯಾವುದಾದರೂ ರೀತಿಯಲ್ಲಿ ನಿಗದಿಯಾಗಿ, ಸ್ಪೆಸಿಫಿಕ್ ಆಗಿ ಇಲ್ಲಿಯೇ ನಮೂದಿಸುವುದು ಒಳ್ಳೆ ಯದು. ಪ್ರತಿಯೊಂದಕ್ಕೂ ಸರ್ಕಾರ ಆರ್ಡರ್ ಮಾಡಬೇಕೆಂದರೆ, ಸರ್ಕಾರಕ್ಕೆ ಬೇರೆ ಕೆಲಸವೇ ಇಲ್ಲವೇ ?

ಕೆಲಸವಿಲ್ಲದೆ ಇರುವ ಕಡೆಗಳಲ್ಲಿ ಕಮಿಷನರನ್ನು ನೇಮಕ ಮಾಡಬೇಕು ಎಂದು ಇದ್ದರೆ ಎಲ್ಲ ಕೆಲಸವನ್ನೂ ಅವರೇ ಮಾಡಲಿ. ಯಾವಾಗ ಪ್ರೆಸಿಡೆಂಟರು ಇರುವುದಿಲ್ಲವೋ ಆಗ ಡೆಪ್ಯುಟಿ ಕಮಿಷನ ರಾಗಲೀ ಅಸಿಸ್ಟೆಂಟ್, ತಹಸೀಲ್ದಾರರಾಗಲೀ ಅವರು ಪ್ರೆಸಿಡೆಂಟರ ಅಧಿಕಾರವನ್ನು ನೋಡಿಕೊಳ್ಳ ಬೇಕಾದ್ದು ಲೆಕ್ಕಾಚಾರವಾಗಿದೆ, ನ್ಯಾಯವಾಗಿದೆ, ಧರ್ಮವಾಗಿದೆ. ಅವರೆ ಪ್ರತಿಯೊಂದು ಸಂದರ್ಭ ದಲ್ಲಿಯೂ ಡೆಪ್ಯುಟಿ ಕಮಿಷನರಿಗೆ ಬರೆಯಬೇಕು, ಅದರಮೇಲೆ ಅವರ ಆರ್ಡರ್ ಮಾಡಬೇಕು ಎಂದರೆ ಬಹಳ ತೊಂದರೆಯಾಗುತ್ತದೆ. ಇಂಥ ಸಂದರ್ಭಗಳಲ್ಲಿ, ಇಂಥ ಸ್ಥಳಗಳಲ್ಲಿ ಇಂಥವರು ಪ್ರೆಸಿಡೆಂಟರ ಅಧಿ ಕಾರವನ್ನು ನೋಡಿಕೊಳ್ಳಬೇಕು ಎಂದರೆ ಆ ಜಾಗ ಖಾಲಿಯಾದ ಕೂಡಲೇ ಚಾರ್ಜು ತೆಗೆದುಕೊಳ್ಳು ತ್ತಾರೆ. ಪ್ರತಿಯೊಂದು ಸಂದರ್ಭದಲ್ಲಿಯೂ ಇಂಥವರು ಅಧಿಕಾರ ವಹಿಸಿಕೊಳ್ಳಬೇಕು ಎಂದರೆ ಕಾಲಹರಣವಾಗುತ್ತದೆ. ಕಾಲ ಕಳೆಯುವುದಕ್ಕೆ ಅವಕಾಶವಿರಕೂಡದು ಎಂದು ನಾನು ಇದಕ್ಕೆ ತಿದ್ದುಪಡಿಯನ್ನು ತಂದಿದ್ದೇನೆ. ಅದನ್ನು ಮಾನ್ಯಸಚಿವರು ದಯವಿಟ್ಟು ಒಪ್ಪಿಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ.

ಸಬ್-ಕ್ಲಾಜ್ ಆರರಲ್ಲಿ ಪ್ರೆಸಿಡೆಂಟರು ಎರಡುತಿಂಗಳ ಕಾಲ ಮತ್ತು ವೈಸ್-ಪ್ರೆಸಿಡೆಂಟರು ಒಂದು ತಿಂಗಳಕಾಲ ಗೈರು ಹಾಜರಾದರೆ ಅವರು ಆ ಸ್ಥಾನದಿಂದ ಹೊರಗೆ ಬರಬೇಕು ಎಂದು ಹೇಳಿದ್ದಾರೆ. ಪ್ರೆಸಿಡೆಂಟರಿಗೆ ಕೆಲಸವಿರುವುದಿಲ್ಲ, ಇದ್ದರೆ ಅಷ್ಟೋ ಇಷ್ಟೋ ಇರುತ್ತದೆ. ಆದರೆ ವೈಸ್-ಪ್ರೆಸಿಡೆಂಟರಿಗೆ ಏನೂ ಕೆಲಸವಿರುವುದಿಲ್ಲ. ಮುನಿಸಿಪಾಲಿಟಿಯಲ್ಲಿ ಬಂದು ಕುಳಿತುಕೊಳ್ಳಬೇಕು ಹೊರಗೆ ಬರಬೇಕು ಅಷ್ಟೆ ಯಾವುದಾದರೂ ಕಾಗದ ಪತ್ರಗಳನ್ನು ತೆಗೆದುಕೊಂಡು ಬಾ ಎಂದರೆ ಪ್ರೆಸಿಡೆಂಟರು ನಮಗೆ ಆ ಅಧಿಕಾರ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇಂಥ ಪ್ರಸಂಗ ಇರುವಾಗ ಕೆಲಸವಿರುವ ಪ್ರೆಸಿಡೆಂಟರಿಗೆ ಎರಡು ತಿಂಗಳು ಮತ್ತು ಕೆಲಸವೇನೂ ಇಲ್ಲದೆ ಇರುವ ವೈಸ್-ಪ್ರಸಿಡೆಂಟರಿಗೆ ಒಂದೇ ತಿಂಗಳು ಎಂದು ಹಾಕಿರುವುದು ಸರಿಯಲ್ಲ. ವೈಸ್-ಪ್ರೆಸಿಡೆಂಟರಿಗೂ ಎರಡು ತಿಂಗಳ ಅವಧಿ ಇರಲಿ ಎಂದು ನನ್ನ ತಿದ್ದುಪಡಿಯಲ್ಲಿ ನಾನು ಸೂಚಿಸಿದ್ದೇನೆ.

ಸಬ್-ಕ್ಲಾಜ್ 13ರಲ್ಲಿ ಪ್ರೆಸಿಡೆಂಟರಿಗೂ ವೈಸ್-ಪ್ರೆಸಿಡೆಂಟರಿಗೂ ಸಂಭಾವನೆಯನ್ನು ಕೊಡುವ ವಿಷಯವಾಗಿ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇಷ್ಟು ವರಮಾನವಿದ್ದರೆ ಇಷ್ಟು ಸಂಭಾವನೆ ತೆಗೆದುಕೊಳ್ಳಬಹುದು ಎಂದು ಎಲ್ಲರಿಗೂ ಅನ್ವಯಿಸುವಂತೆ ಒಂದೇ ರೀತಿಯಲ್ಲಿ ಮಾಡುವುದು ಒಳ್ಳೆ ಯದು. ಪ್ರತಿಯೊಂದು ಮುನಿಸಿಪಾಲಿಟಿಯೂ ತನಗೆ ಇಷ್ಟಬಂದಂತೆ ಕೊಡಲು ಸರ್ಕಾರದ ಒಪ್ಪಿಗೆ ಯನ್ನು ಕೇಳುವುದು ಸರಿಯಲ್ಲ. ಆದುದರಿಂದ ನಾನು ಸೂಚಿಸಿರುವ ತಿದ್ದುಪಡಿಯನ್ನು ಮಾನ್ಯ ಸಚಿವರು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† Sri B. R. SUNTHANKAR.—My amendments relate to sub-clauses 4, 7 and 12. These sub-clauses are encroachments on the powers and rights of the municipalities. That State Government has the power of appointing President and Vice-President. Even in the case of death or resignation of the President or the Vice-President, Government takes the power of appointing them. This is highly objectionable. The best course would be to fill up the vacancy by election. Government cannot take away that right and force a President or Vice-President on the Municipality. Since the introduction of the Montague Chelmsford Reforms in 1919, local bodies have been electing their Presidents and Vice-Presidents and it looks strange that after 40 years, Government should try to fill up vacancies by appointment to be made by Government. This would reduce local self-government to a sheer mockery. If this clause is adopted, it would result in much mischief. If the Councillors do not want a particular man to become President or Vice-President, they may work out things in such a way that no election could take place. They may approach Government to appoint a man of their choice. I do not understand why Government should take upon itself the responsibility of appointing a President or Vice-President.

I object to sub-clause 13. Tha posts of President and Vice-President should be honorary and should not carry remuneration.

There has been a tradition in our country of service and sacrifice. Great persons and personages have worked as Presidents and Vice-Presidents. I may mention Sir the late Gopalakrishna Gokhale, Sir Pheroze Shaw Mehta, Mavalankar, even Sardar Patel. Such great personages have been Presidents. That has been the tradition. The tradition is to work as President in a spirit of service and sacrifi e. This sub-clause (13) goes against this tradition, that valuable tradition. I, therefore oppose this sub-clause, Sir. In any case, they should not be given any allowance.

5-30 P.M.

† ಶ್ರೀ ಗಂಗಾಧರ ನಾಮೋಶಿ.—ಮಿನಿಷ್ಟರೂ ಕೂಡ ಇದಕ್ಕೆ ತಿದ್ದುಪಡಿ ಸೂಚನೆ ಮಾಡಬೇಕಾಗಿ ಬಂತಲ್ಲಾ ಎಂದು ಅಷ್ಟೆ ನಮ್ಮ ವ್ಯಸನ. ವಿರೋಧ ಪಾರ್ಟಿಯವರು ಸೂಚನೆ ಮಾಡಿರುವ ತಿದ್ದುಪಡಿಗಳು ನಾಲ್ಕು ಪುಟಗಳಾದರೆ, ಮಿನಿಷ್ಟರು ಸೂಚನೆ ಮಾಡಿರುವ ತಿದ್ದುಪಡಿಗಳು ಏಳು ಪುಟ ಆಗುತ್ತದೆ. ಅದಕ್ಕೆ ನಾವು ಹೇಳಿದ್ದು ಏನೆಂದರೆ ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿ ಇದನ್ನು ಒಳ್ಳೆಯ ರೀತಿಯಿಂದ ಮಾಡಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ. ಮಿನಿಷ್ಟರು ಟರ್ಮ್ ಆಫ್ ಆಫೀಸ್ ಎನ್ನುವುದಕ್ಕೆ ತಿದ್ದುಪಡಿ ಮಾಡಿರುವ ವಿಷಯದಲ್ಲಿ ಅದು ಕಂಪ್ಲೀಟ್ ಪೀರಿಯಡ್ ಇರಬೇಕೆಂದು ಒತ್ತಿ ಹೇಳುತ್ತೇನೆ. ಒಂದು ವರ್ಷದ ಅವಧಿಯನ್ನು ಬದಲಾಯಿಸುವುದಕ್ಕೆ ಕೌನ್ಸಿಲರ್‌ನವರಿಗೆ ಅಧಿಕಾರ ಕೊಟ್ಟರೆ ದಿವಸಕ್ಕೆ ಒಂದೊಂದು ರೀತಿಯಲ್ಲಿ ಆಗಿ ಇವತ್ತು ಇವರು ನಾಳೆ ಮತ್ತೊಬ್ಬರು ಈ ರೀತಿಯೆಲ್ಲಾ ಆಗಬಹುದು. ಹಿಂದೆ ಮೊಗಲಾಯರ ಕಾಲದಲ್ಲಿ ಆಗುತ್ತಿದ್ದಂತೆ 'ಏಕ್ ದಿನ್ ಕಾ ಸುಲ್ತಾನ್' ಎನ್ನುವಂತೆ ಆಗುತ್ತದೆ. ಈ ರೀತಿ ಎಲ್ಲಾ ಆಗಬಹುದು. ಈ ದಿನ ಮಂತ್ರಿಗಳು, ಉಪಮಂತ್ರಿಗಳು ಆಗಿರುವ ತಾವು ನಾಳೆ ದಿನ ಮುನಿಸಿಪಲ್ ಪ್ರೆಸಿಡೆಂಟರೇ ಆದಾಗ ತಮಗೇ ಅನಿಸುತ್ತದೆ ನಾನು ಏಕೆ ಈ ಸ್ಥಾನಕ್ಕೆ ಬಂದೆನೋ ಎಂದು ; ಅಷ್ಟು ತಾಪತ್ರಯ ಪಡುತ್ತೀರಿ. ಆತರ ಆತುರವಾಗಿ ಮಾಡಿದ್ದೀರಿ, ಈಗ ಮಾಡಿದ್ದು ಸರಿಯಾದದ್ದಲ್ಲ ಎಂದು ಹೇಳುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ, ಶ್ರೀಮಾನ್ ಕೊಂಡಜ್ಜಿ ಬಸಪ್ಪನವರನ್ನು ಕೇಳಿದ್ದರೆ ಒಳ್ಳೆಯ ರೀತಿಯಲ್ಲಿ ಉತ್ತರ ಕೊಡುತ್ತಿದ್ದರು, ತಾಲ್ಲೂಕು ಬೋರ್ಡ್, ಪಂಚಾಯ್ತಿಗಳನ್ನು ಈ

ತರಹ ಮಾಡಲಿಲ್ಲ ಎಂದಮೇಲೆ ನಿಮಗೆ ಈ ರೀತಿ ಮಾಡಲು ಯಾವ ರೀತಿ ಬುದ್ಧಿ ಬಂತೋ ಅರ್ಥವಾಗಲಿಲ್ಲ. ತಾಲ್ಲೂಕು ಬೋರ್ಡ್ ಆಕ್ಟ್, ಪಂಚಾಯಿತ್ತಿ ಆಕ್ಟ್ ಮಾಡುವ ಕಾಲಕ್ಕೆ ರಾಜಾಸ್ಥಾನ, ಕಲ್ಕತ್ತಾ, ಮದ್ರಾಸು, ಇಲ್ಲೆಲ್ಲಾ ಇರತಕ್ಕ ಪ್ರೋಗ್ರೆಸೀವ್ ಆಕ್ಟ್ ಇಟ್ಟುಕೊಂಡು ಮಾಡಿದ್ದಾರೆ, ಆದ್ದರಿಂದ ಅದರ ಬಗ್ಗೆ ಒಳ್ಳೆಯ ಆಕ್ಟ್ ಬಂತು. ಆದ್ದರಿಂದ ತಾವು ಕೊಟ್ಟಿರತಕ್ಕ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಂಡು ಇನ್ನೊಂದು ಸಾರಿ ಎಲ್ಲವನ್ನೂ ಚೆನ್ನಾಗಿ ಪರಿಶೀಲನೆ ಮಾಡಿ ಇದನ್ನು ಸುಧಾರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

†Sri S. RAJAGOPAL.—Sir, here I want to know specifically that there should be some fixed amount for this President and Councillors. It may be mentioned in the rules also. If an assurance can be given to that effect, I am prepared to withdraw. I am not supporting the argument advanced by my Hon'ble friend Sri B. R. Sunthankar saying that a spirit of service and sacrifice should be there. Even to-day, M.Ps are demanding more salary. That is the case of our society. It is impossible to expect such a sacrifice from Presidents and Vice-Presidents. I am requesting the Hon'ble Minister if there is any possibility of fixing certain amounts. If so, I am prepared to withdraw my amendment.

Mr. SPEAKER.—The Hon'ble Member may refer to this Assembly and Members here and need not refer to Parliament.

Sri K. PUTTASWAMY.—Sir, I have already said at the outset while moving my amendment regarding the necessity.

Regarding the idea of prescribing allowances under the Rules, I shall consider it, Sir.

Regarding other matters referred to by the Hon'ble Member Sri C. V. Venkatarayappa and others, I regret I am unable to accept the amendmentss.

Mr. SPEAKER.—I will put these amendments to the vote of the House. I will go sub-clause after sub-clause. The question is:

"That for sub-clause (1), the following shall be substituted:

(1) for every City Municipal Council, there shall be a President and a Vice-President and for every Town Municipal Council, there shall be a President and if the Municipal Council so resolved, a Vice-President in addition to the President."

The amendment was negatived.

Mr. SPEAKER.—There are two amendments to sub-clause: Amendment No. 38 was not moved: The question is:

" That sub-clause (4) shall be deleted."

The amendmdnt was negatived.

Mr. SPEAKER.—The question is:

'That in clause 42, in sub-clause (5), line 8, after the words "Town Municipalities," the words, "the same procedure as in sub-section (4) shall be followed and" shall be added.'

The amendment was negatived.

Mr. SPEAKER.—The question is :

'That in clause 42, in sub-clause (5), for the words "not below the rank of an...perform the functions of the President" the words "the Deputy Commissioner in the case of the City Municipalities and the Assistant Commissioner, if the local area in which the Municipality is situated in his Headquarters and the Tahsildar of the place, in the case of other Municipalities, shall perform the functions of the President.'

The amendment was negatived.

Mr. SPEAKER.—The question is :

'That in clause 42, in sub-clause (6), line 2, for the words "one month" the words "two months" shall be substituted.'

The amendment was negatived.

Mr. SPEAKER.—The question is :

'That in sub-clause (7), line 2, for the words "six months" the words "six continuous months" shall be substituted.'

The amendment was negatived.

Mr. SPEAKER.—The question is :

'That in clause 42, in sub-clause (7), line 8, after the word "President" the words "the same procedure as in sub-section (4) shall be followed and" shall be added.'

The amendment was negatived.

Mr. SPEAKER.—The question is :

'That in clause 42, in sub-clause (7), the words "If the Municipal Council fails to elect............vacancy by appointment" shall be deleted '.

The amendment was negatived.

Mr. SPEAKER.—I will now put amendment by the Hon'ble Minister. The question is :

'That in proviso to sub-clause (9), for the word "fifteen" the word "ten" shall be substituted, and after the said proviso, the following further proviso shall be inserted, namely :—

"Provided further that where a resolution expressing want of confidence in any President or Vice-President has been considered and negatived by a municipal council, a similar resolution in respect of the same President or the Vice-President shall not be given notice of or moved within one year from the date of the decision of the Municipal Council."

"That for sub-clause (1), the following sub-clause shall be substituted, namely:—

(1) The term of office of every President and of every Vice-President shall, save as provided in this Act, cease on the expiry of the term of office as councillor:

Provided that the Government may, with the consent of the Municipal council concerned, direct that the term be limited to one year and that elections therefor be held every year."

The amendment was negatived.

Mr. SPEAKER.—The question is:

"That in sub-clause (9) line 2, after the word 'office' the words 'as such' shall be added."

The amendment was negatived.

Mr. SPEAKER.—The question is:

"That in sub-clause (12) lines 5 and 6 after words "filled up" the words 'in accordance with the procedure laid down in sub-section (4) and' shall be added".

The amendment was n gatived.

Mr. SPEAKER.—The question is:

"That sub-clause (12) shall be deleted".

The amendment was negatived.

Mr. SPEAKER.—The question is:

'That in sub-clause(13), lines 2 and 3 between the words "allowances" and "as" the words "not exceeding 150 Rupees" shall be inserted.'

The amendment was negatived.

Mr. SPEAKER.—The question is:

'That in sub-clause (13) line 4, after the word "Government" the words "in accordance with rules framed by Government" shall be added at the end.'

The amendment was negatived.

Mr. SPEAKER.—The question is:

"That sub-clause (13) shall be deleted".

The amendment was negatived.

Mr. SPEAKER.—The question is:

"That clause 42, as amended, stand part of the Bill."

The motion was adopted.

Clause 42, as amended, was added to the bill.

CLAUSE 43.

Mr. SPEAKER.—Before we proceed, I find that Hon'ble Members have a feeling that they had not enough time to read the report. So, we shall adjourn at 6 P.M. to-day.

Sri B. R. SUNTHANKAR.—Sir, I beg to move:

"That items (*d*) and (*e*) shall be deleted."

Mr. SPEAKER.—Amendment moved:

"That items (*d*) and (*e*) shall be deleted."

† Sri B. R. SUNTHANKAR.—Sir, in fact, furnishing the particular information or extracts is the work of the officers and not that of the President. By this, the Municipal President is reduced to the place of a subordinate of the Commissioner or Deputy Commissioner. This clause restricts the power of the President, if I may say so. While saying so, I would like to compare this Act with the Bombay Act. The Bombay Act gives more powers to the President. It gives the power of supervision and control over the municipal affairs. Section 31 (*c*) of the Bombay Act gives power to the President to supervise and control the acts of the municipality. Sub-section (*d*) of section 31 gives also emergency powers to the President. As compared to that Act, under this Act the President almost becomes a presiding authority. This is understandable. This post of President is reduced to a mockery.

†Sri K. PUTTASWAMY.—Sir, there is no such intention. The clause only says that he has to furnish the resolutions and other things for the information of the Government.

Mr. SPEAKER.—The question is:

"That in clause 43 items (*d*) and (*e*) shall be deleted."

The amendment was negatived.

Mr. SPEAKER.—The question is:

"That clause 43 stand part of the bill"

The motion was adopted.

Clause 43 was added to the bill.

CLAUSE 44.

Mr. SPEAKER.—There is no amendment. The question is:

"That clause 44 stand part of the Bill".

The motion was adopted.

Clause 44 was added to the Bill.

Mr. SPEAKER.—Clause 45.

Sri C. V. VENKATARAYAPPA.—Sir, I beg to move :

'That in sub-clause (3) line 6, after the word "President" the words "in the case of City Municipalities and the Deputy Commissioner in the case of Town Municipalities" shall be added.'

Mr. SPEAKER.—Amendment moved :

'That in sub-clause (3) line 6, after the word "President" the words "in the case of City Municipalities and the Deputy Commissioner in the case of Town Municipalities" shall be added.'

†ಶ್ರೀ ಸಿ. ವಿ. ವೆಂಕಟರಾಯಪ್ಪ.—ಸ್ವಾಮಿ, ಕ್ಲಾಜ್ 43ರ ಸಬ್-ಕ್ಲಾಜ್ (3)ರ ಪ್ರಕಾರ ಯಾರಾದರೂ ಯಾವುದಾದರೂ ರೆಕಾರ್ಡಿನ ಕಾಪಿ ಬೇಕಾದರೆ ಅದನ್ನು ಚೀಫ್ ಆಫೀಸರು ಅವರಿಗೆ ಬೇಕಾದರೆ ಕೊಡಬಹುದು, ಇಲ್ಲವೇ ಇಲ್ಲ ಎಂದು ಬೇಕಾದರೂ ಹೇಳಬಹುದು. ಅನಂತರ ಅಧ್ಯಕ್ಷ ರನ್ನೂ ನಾವು ಕೇಳಬಹುದು. ಆದರೆ ಅಧ್ಯಕ್ಷರು ಯಾವ ಆರ್ಡರ್ ಮಾಡಿದರೆ ಅದೇ ಫೈನಲ್ ಎಂಬ ಅರ್ಥವನ್ನು ಈ ಕ್ಲಾಜ್ ಸೂಚಿಸುತ್ತಿದೆ. ಟೌನ್ ಮುನಿಸಿಪಾಲಿಟಿಗಳ ಲೆಕ್ಕ ಸಿಟಿ ಮುನಿಸಿಪಾಲಿಟಿ ಗಳಂತೆ ಅಲ್ಲ. ಇಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ. ಆದುದರಿಂದ ಪ್ರತಿಯೊಬ್ಬರಿಗೂ ಸರಿಯಾದ ನ್ಯಾಯ ದೊರೆಯಲಿ ಎಂದು ನಾನು ಈ ತಿದ್ದುಪಡಿಯನ್ನು ಸೂಚಿಸಿದ್ದೇನೆ.

ಕ್ಲಾಜು 45 ರಲ್ಲಿರುವ ಸಬ್-ಕ್ಲಾಜು (3)ರಲ್ಲಿ "Every Councillor shall have access to one Records, etc." ಎಂದು ಹೇಳಿ ಕೊನೆಯಲ್ಲಿ 'The President's decision shall be final ಎಂದಿದೆ.

ಮುನಿಸಿಪಲ್ ಕಮಿಷನರು ಆರ್ಡರು ಮಾಡಿದಮೇಲೆ ಪ್ರೆಸಿಡೆಂಟರಿಗೆ ಅಪೀಲು ಮಾಡುವಾಗ ಎಷ್ಟೋ ವ್ಯತ್ಯಾಸಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಆದರೂ ಈಗ ಕಮಿಷನರಾಗಿರುವವರು ಡಿ.ಸಿ. ಗ್ರೇಡಿಗೆ ಸೇರಿದವರಾಗಿರುವುದರಿಂದ ಸ್ವಲ್ಪ ಪರಿಶೀಲಿಸಿ ಆರ್ಡರು ಮಾಡುತ್ತಾರೆ. ಟೌನು ಮುನಿಸಿಪಾಲಿಟಿಗಳಲ್ಲಿ ಚೀಫ್ ಆಫೀಸರು ಮಾಡುವ ಆರ್ಡರಿನ ಮೇಲೆ ಅಪೀಲಿಗೆ ಅವಕಾಶ ಕೊಡದೇ ಹೋದರೆ ಸರಿಯಾಗಿರುವುದಿಲ್ಲ. ಇಂತಹ ಅಪೀಲುಗಳನ್ನು ಡೆಪ್ಯುಟಿ ಕಮಿಷನರವರ ಕಡೆಗೆ ಕಳಿಸಿ ಕೊಡುವುದು ಮೇಲು.

Sri K. PUTTASWAMY.—I cannot accept the amendment.

Mr. SPEAKER.—The question is :

'That in sub-clause (3) of line 6, after the word "President" the words "in the case of City Municipalities and the Deputy Commissioner in the case of Town Municipalities" shall be added.

The amendment was negatived.

Mr. SPEAKER.—The question is ;

"That clause 45 stand part of the Bill."

The motion was adopted.

Clasue 45 was added to the Bill.

Clauses 46 to 51.

Mr. SPEAKER.—The question is:

"That clauses 46 to 51 'both inclusive' stand part of the Bill."

The motion was adopted.

Clauses 49 to 51, both inclusive, were added to the Bill.

Clause 52.

Sri C. V. VENKATARAYAPPA.—I beg to move:

'That in sub-clause (1), the words "Save as otherwise provided in this Act" shall be deleted.'

Mr. SPEAKER.—Amendment moved:

'That in sub clause (1), the words "Save as otherwise provided in this Act" shall be deleted.'

† ಶ್ರೀ ಸಿ. ವಿ. ವೆಂಕಟರಾಯಪ್ಪ.—ಕ್ಲಾಜು 52ರಲ್ಲಿರುವ ಸಬ್-ಕ್ಲಾಜು (1)ರಲ್ಲಿ "Save as otherwise provided in this Act" ಎಂದಿದೆ. ನನ್ನ ಅಭಿಪ್ರಾಯದಲ್ಲಿ ಪ್ರತಿಯೊಂದು ಪ್ರಶ್ನೆಯೂ ಮುನಿಸಿಪಲ್ ಕೌನ್ಸಿಲ್ಲಿಗೆ ಬಂದಾಗ ಒಂದು ಮೆಜಾರಿಟಿ ಅಭಿಪ್ರಾಯದಮೇಲೆ ತೀರ್ಮಾನವಾಗಬೇಕಾಗುತ್ತದೆ. "Save as otherwise provided in this Act" ಎಂದು ಏತಕ್ಕೆ ಇವರಲ್ಲಿ ಹಾಕಿದ್ದಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅಲ್ಲದೇ ಈ ಬಗ್ಗೆ ಈ ಮಸೂದೆಯ ಬೇರೆ ಯಾವುದಾದರೂ ಕ್ಲಾಜಿನಲ್ಲಿ ಏನಾದರೂ ಹೇಳಿದ್ದಾರೆಯೋ ಏನೋ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ.

Sri K. PUTTASWAMY.—There are certain statuatory powers vested in the Commissioner and the Chief Officer. Probably it refers to them.

Sri G. V. GOWDA.—This clause refers to matters to be discussed in the Council and to be decided by a majority. It does not refer to the Commissioner and there can be no exception to the 'majority' rule. I have gone through all the clauses and I find no clause which prescribes something different than the majority.

ಶ್ರೀ ಸಿ. ವಿ. ವೆಂಕಟರಾಯಪ್ಪ.—ನಾನಿನ್ನೂ ಪೂರ್ತಿಯಾಗಿ ಹೇಳಲಿಲ್ಲ. ಇದರಲ್ಲ ಇಂತಿಂತಹ ವಿಚಾರಗಳಲ್ಲಿ ಕೌನ್ಸಿಲ್ಲಿನವರ ಮಾತನಾಡಲು ಅಧಿಕಾರವಿಲ್ಲ ಎಂದೇನಾದರೂ ರಿಸಲ್ಯೂಷನನ್ನು ಮಾಡಲು ಮೆಜಾರಿಟಿ ಸದಸ್ಯರ ಅಭಿಪ್ರಾಯದ ಮೇಲೆ ತೆಗೆದುಕೊಳ್ಳಬಹುದು. ಇದು ಒಂದು ರೀತಿ ಆದರೆ ಇಲ್ಲಿರುವುದು ಒಂದು ವಿಚಿತ್ರವಾಗಿದೆ ಇದರಲ್ಲಿ "Subject to so and so" ಎಂದು ಏನಾದರೂ ಬೇಕಾದರೆ ಹಾಕಲಿ. ಹಾಗಿಲ್ಲದೆ ಇದರಲ್ಲಿ 'Save as otherwise' ಎಂದು ಬರೆದಿರುವುದು ಅರ್ಥವಿಲ್ಲದ ಹಾಗಾಗುತ್ತದೆ. ಇದು ನ್ಯಾಯವಾದುದಲ್ಲ, ಇದನ್ನು ಡಿಲೀಟ್‌ಮಾಡಲು ಮಂತ್ರಿಗಳು ಒಪ್ಪುತ್ತಾರೆಂದು ಆಶಿಸುತ್ತೇನೆ.

† Sri K. PUTTASWAMY.—The section itself is very clear. There are certain matters which are beyond the purview of the Council. I cannot agree to the amendment. For example, if the Council wants to consider the removal of a Chief Officer or Commissioner, three-fourths majority is prescribed in this Bill. The subsequent provisions will show how and in what shape the majority decision will have to be,

Mr. SPEAKER.—The question is:

'That in sub-clause (1), the words "Save as otherwise provided in this Act" shall be deleted.'

The amendment was negatived.

Mr. SPEAKER.—The question is:

"That Clause 52 stand part of the Bill."

The motion was adopted.

Clause 52 was added to the Bill.

CLAUSE 53.

Mr. SPEAKER.—The question is:

"That Clause 53 stand part of the Bill."

The motion was adopted.

Clause 53 was added to the Bill.

Mr. SPEAKER.—The House will now adjourn to meet again at 1 P.M. tomorrow, the 5th December 1963.

The House adjourned at Six of the Clock to meet again at One of the Clock on Thursday, the 5th December 1963.

WD 1654—GPB—900-4—1-64.